# ಆಶೌಚ ಸಂಗ್ರಹ

ಸಂಪಾದಕ ಮತ್ತು ಪ್ರಕಾಶಕ

**ಚತುಃ ಶಾಸ್ತ್ರ ವಿದ್ವಾನ್ ಕೋಟ ವಾಸುದೇವ ಸೋಮಯಾಜಿ**
ನಿಗಮಾಗಮ ಪ್ರವೀಣ, ಪಂಡಿತ ರತ್ನಂ, ವೇದ ವಾರಿಧಿ

1998

ಬೆಲೆ ರೂ : 15-00

**ಕೆ. ವಾಸುದೇವ ಸೋಮಯಾಜಿ, ಇವರಲ್ಲಿ ದೊರೆಯುವ ಪುಸ್ತಕಗಳು**

| | |
|---|---|
| 1) ಕ್ಷಯಮಾಸ ಮೀಮಾಂಸಾ | (ಸಂಸ್ಕೃತ) |
| 2) ಅನುಷ್ಠಾನ ಪದ್ಧತಿ | " |
| 3) ಕ್ರಿಯಾ ಸಾರ | " |
| 4) ಲಕ್ಷಣ ಸಂಹಿತಾ | " |
| 5) ವಿಷ್ಣು ಸಂಹಿತಾ | " |
| 6) ವಾಸಿಷ್ಠ ಸಂಹಿತಾ | |
| 7) ವಿನಾಯಕೋದಯ | ಕನ್ನಡ |
| 8) ಗುರು ನರಸಿಂಹ ಸುಪ್ರಭಾತ | " |
| 9) ಋಗ್ವೇದೀಯ ನಿತ್ಯಾನುಷ್ಠಾನ ಪದ್ಧತಿ ಭಾಗ ೧ (ಸಂಧ್ಯಾದಿ) | " |
| 10) ಋಗ್ವೇದೀಯ ನಿತ್ಯಾನುಷ್ಠಾನ ಪದ್ಧತಿ ಭಾಗ ೨ (ಆಶೌಚಾದಿ) | " |
| 11) ಭಾರತೀಯ ಧರ್ಮ ದರ್ಶನ | " |

**Kootastha Veda Shastra Poshaka Sangha®**
97, 3rd Main, 2nd Cross, Sarakki Dollar Layout
J P Nagar - 4th Phase    Bangalore – 560 078
Phone : 080-26582401
kootastha@yahoo.com / www.kootastha.org

32971

# ಆಶೌಚ ಸಂಗ್ರಹ

ಸಂಪಾದಕ ಮತ್ತು ಪ್ರಕಾಶಕ

**ಚತುಃ ಶಾಸ್ತ್ರ ವಿದ್ವಾನ್ ಕೋಟ ವಾಸುದೇವ ಸೋಮಯಾಜಿ**

ನಿಗಮಾಗಮ ಪ್ರವೀಣ, ಪಂಡಿತ ರತ್ನಂ, ವೇದ ವಾರಿಧಿ

1998

ಬೆಲೆ ರೂ : 15-00

# ಪ್ರಸ್ತಾವನಾ

ಆಸ್ತಿಕರಿಗೆ ಧರ್ಮಾಚರಣೆ ಮಾಡಲು, ಬೇಕಾದ ಕಾಲ ನಿರ್ಣಯಿಸಲು ಪಂಚಾಂಗ ಹೇಗೆ ಮುಖ್ಯವೋ ಧರ್ಮಾನುಷ್ಠಾನಕ್ಕೆ ಶುದ್ಧಿಯೂ ಅಷ್ಟೇ ಮುಖ್ಯ. "ಶುಚಿನಾ ಕರ್ಮ ಕರ್ತವ್ಯಂ" ಎನ್ನುತ್ತದೆ ಶಾಸ್ತ್ರ: ಶುಚಿತ್ವ ಇಲ್ಲದೆ ಮಾಡಿದ ಕರ್ಮ ಜಲತಾಡನೆಯಂತೆ ವ್ಯರ್ಥ. ಶುಚಿತ್ವವನ್ನು ಕೆಡಿಸುವುದರಲ್ಲಿ ಆಶೌಚವು ಒಂದು. ಈ ಆಶೌಚ ಕಣ್ಣಿಗೆ ಕಾಣುವ ವಸ್ತುವಲ್ಲ. ಶಾಸ್ತ್ರದಿಂದ ನಿರ್ಣಯಿಸಬೇಕಾದುದು. ಶಾಸ್ತ್ರವೋ ಬಹಳ ವಿಶಾಲವಾದುದು. ಈ ಶಾಸ್ತ್ರವೆಂಬ ಗೊಂಡಾರಣ್ಯವನ್ನು ಹೊಕ್ಕು ನಿರ್ಣಯಿಸಿ ಹೊರಬರುವುದರಲ್ಲಿ ಆಶೌಚವೇ ಮುಗಿದಿರುತ್ತದೆ. ಹಿಂದೆ ಈ ಆಶೌಚ ನಿರ್ಣಯವನ್ನು ಶ್ರೋತ್ರಿಯರ ಮನೆಯ ಸುವಾಸಿನಿಯರೇ ಸುಲಭವಾಗಿ ತಿಳಿಸುತ್ತಿದ್ದರು. ಈಗ ವೈದಿಕರಿಗೇ ನಿರ್ಣಯಿಸಲು ಹಿಂದು ಮುಂದು ನೋಡುವ ಸ್ಥಿತಿ ಒದಗಿರುವಾಗ ಸಾಮಾನ್ಯ ಜನರಿಗಂತೂ ಅಸಾಧ್ಯವೇ ಸರಿ. ಪ್ರಸ್ತುತ ಹೆಚ್ಚು ಜನರಿಗೆ ಆಶೌಚವೆಂದರೇನೆಂದೇ ತಿಳಿಯದು. ಆದರೂ ಇಂದೂ ಕೆಲವು ಆಸ್ತಿಕರು ಇದ್ದಾರೆ. ಅವರಿಗೆ (ಶ್ರಧ್ಧಾಳುಗಳಿಗೆ ತಿಳಿಸುವುವರೇ ವಿರಳವಾಗುತ್ತಿರುವಾಗ) ಸ್ವತಃ ತಿಳಿದುಕೊಂಡು ಕರ್ಮಾನುಷ್ಠಾನ ಮಾಡಲು ಅನುಕೂಲವಾಗಲೆಂದು ಈ ಕಾರ್ಯ ಕೈಗೊಳ್ಳಲಾಗಿದೆ. ಒಬ್ಬನೇ ಋಷಿಯಲ್ಲ. ಹಲವಾರು ಮತಗಳು ಪರಸ್ಪರ ವಿರುದ್ಧವಾದಂತೆ ಕಾಣುತ್ತಿವೆ. ಸಮರ್ಥರು ಸುಲಭವಾಗಿ ತಿಳಿದು ಅನುಷ್ಠಾನ ಮಾಡುತ್ತಾರೆ. ಸಾಮಾನ್ಯರು ಏನು ಮಾಡಬೇಕು. ಒಂದೇ ಮಾತುಲನ ವಿಷಯದಲ್ಲಿ ತ್ರಿದಿನ ; ಪಕ್ಷಿಣೀ, ದಿನ ಅಶೌಚವೆಂದು ಹೇಳುವ ಶಾಸ್ತ್ರಗಳನ್ನು ನೋಡಿ ಹೇಗೆ ನಿರ್ಣಯಿಸಬೇಕು. ಇದಕ್ಕೆ ಸುಲಭೋಪಾಯವನ್ನು ತಿಳಿಸಿದ್ದಾರೆ. ಉಪಕಾರ ಸಾಮೀಪ್ಯ, ದೂರ, ಬಾಂಧವ್ಯ ಇವುಗಳಿಂದ ನಿರ್ಣಯಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಗಂಡನ

ಮೃತಿಯಲ್ಲಿ ಹೇಳಿದ ಆಶೌಚ ಅವನ ಹೆಂಡತಿ ಮೃತಳಾದಾಗ ಇರುವುದಿಲ್ಲ. ಆದರೆ ಸೋದರಮಾವನ ಮೃತಿಯಲ್ಲಿ ಹೇಳಿದ ಆಶೌಚ ಅವನ ಹೆಂಡತಿಯ ಮೃತಿಯಲ್ಲೂ ಇರುತ್ತದೆ. ಇದನ್ನೆಲ್ಲ ತಿಳಿದುಕೊಳ್ಳುವುದು ಬಹಳ ಕಷ್ಟದ ಕೆಲಸ. ಅದೂ ಕೂಡ ಆಶೌಚ ಬಂದಾಗ ಕರ್ತವ್ಯದ ಭಾರ ತಲೆಯ ಮೇಲೆ ಕುಳಿತಿರುವಾಗ ಗ್ರಂಥಾವಲೋಕನಕ್ಕೆ ಸಮಯವಾದರೂ ಎಲ್ಲಿ? ಇದನ್ನೆಲ್ಲಾ ಗಮನಿಸಿ ಪಂಚಾಂಗದಂತೆ ಈ ಆಶೌಚ ಸಂಗ್ರಹವೂ ಜೊತೆಯಲ್ಲಿಯೇ ಇದ್ದರೆ ಆಶೌಚ ತಿಳಿದು ಅನುಷ್ಠಾನ ಮಾಡಲು ಆಸಕ್ತರಿಗೆ ತಿಳಿಸಲು, ಅನುಕೂಲವಾದೀತು ಎಂಬ ಉದ್ದೇಶದಿಂದ ಈ ಸಂಗ್ರಹಕ್ಕೆ ತೊಡಗಬೇಕಾಯ್ತು. ಕಲಿಯುಗದಲ್ಲಿ ಆಶೌಚ ಸಂಕೋಚ ಮಾಡಬಾರದು ಎಂದಿರುವುದರಿಂದ, ಮೂರುದಿನ, ಪಕ್ಷಿಣೀ, ಒಂದು ದಿನವೆಂತ ಬೇರೆ ಬೇರೆ ಹೇಳಿದ್ದರೂ ಹೆಚ್ಚಿನ ಆಶೌಚಕಲ್ಪವನ್ನೇ ತೆಗೆದುಕೊಳ್ಳಬೇಕು.

ಈ ಸಂಗ್ರಹದಿಂದ ಆಸ್ತಿಕರ ಅನುಷ್ಠಾನಕ್ಕೆ ಸ್ವಲ್ಪವಾದರೂ ಉಪಕಾರವಾದರೆ ನಾನು ಧನ್ಯ.

ವಿದ್ವದನುಚರ
ಕೋಟ ವಾಸುದೇವ ಸೋಮಯಾಜಿ
1469/1ಕೃಷ್ಣಮೂರ್ತಿಪುರಂ, ಮೈಸೂರು. ೪



ಶ್ರೀಃ

ಶ್ರೀ ಮಹಾಗಣಪತಯೇ ನಮಃ

**ದೇಶಭಾಷಾಮುಪಾದಾಯ ಕರೋಮ್ಯಾಶೌಚ ಸಂಗ್ರಹಂ**
**ಬಾಲಾನಾಂ ಸುಖಬೋಧಾಯ ವಿನಾ ವಚನಸಂತತಿಂ |**

ಅಶೌಚವೆಂದರೆ ಅಶುಚಿತ್ವ. ಆಶೌಚದಲ್ಲಿ ಹೇಳಿದ ಕರ್ಮ ಬಿಟ್ಟು ಇತರ ಯಾವ ಕರ್ಮ ಧರ್ಮಾಚರಣೆಯೂ ಇಲ್ಲ. ಆಶೌಚ ಕಣ್ಣಿಗೆ ಕಾಣುವ ವಸ್ತುವಲ್ಲ. ದೇಹ ಮತ್ತು ಆತ್ಮನಿಗೆ ಸಂಬಂಧಪಟ್ಟುದು. ಶಾಸ್ತ್ರದಿಂದ ಮಾತ್ರ ತಿಳಿಯತಕ್ಕದ್ದು . ಹೇಳಿದ ಕಾಲದ ನಂತರ ಸ್ನಾನಾದಿಗಳಿಂದ ಅದು ಹೋಗುತ್ತದೆ. ಮೃತಾಶೌಚದಲ್ಲಿ ಕರ್ಮಾನಧಿಕಾರ, ಅಸ್ಪೃಶ್ಯತ್ವ ಎರಡೂ ಇರುತ್ತದೆ. ಅಸ್ಪೃಶ್ಯತ್ವವೆಂದರೆ ಇತರರನ್ನು ಮುಟ್ಟಬಾರದು. ಅಶೌಚವಿಲ್ಲದವರೂ ಕೂಡಾ ಆಶೌಚಿಗಳನ್ನು ಮುಟ್ಟಿಕೊಂಡರೆ ಅವರಿಗೂ ಆಶೌಚಬರುತ್ತದೆ. ಜಾತಾ ಶೌಚದಲ್ಲಿ ತಂದೆಗೆ ಸ್ನಾನದರೆಗೂ ಹಡೆದ ತಾಯಿಗೆ ಹತ್ತು ದಿನಗಳವರೆಗೂ ಅಸ್ಪೃಶ್ಯತ್ವವೂ ಇರುತ್ತದೆ. ಆಶೌಚದಲ್ಲಿ ಮಾಡಬೇಕಾದ, ಮಾಡಬಾರದ ಕರ್ಮಗಳನ್ನು ಮುಂದೆ ತಿಳಿಸಲಾಗುತ್ತದೆ. ಸಾಮಾನ್ಯವಾಗಿ ಜಾತಾಶೌಚದಲ್ಲಿ ಅಸ್ಪೃಶ್ಯತ್ವವಿಲ್ಲ.

## ಆಶೌಚಾರಂಭಕಾಲ

ರಾತ್ರಿಯ ಮೊದಲಿನ ಅರ್ಧಯಾಮ ಹಗಲಿಗೂ ಕೊನೆಯ ಅರ್ಧ ಯಾಮ ಮುಂದಿನ ದಿನಕ್ಕೂ ಸೇರುವುದರಿಂದ ರಾತ್ರಿಗೆ ತ್ರಿಯಾಮಾ ಎಂತ ಹೆಸರು. ಅದರಲ್ಲಿ ಎರಡು ಯಾಮ ಆ ದಿನಕ್ಕೂ ಮೂರನೇ ಯಾಮ, ಮುಂದಿನ ದಿನಕ್ಕೂ ಸೇರುತ್ತದೆ. ಆ ದಿನದ 60 ಗಳಿಗೆಯಲ್ಲಿ ಹಗಲಿನ ಪ್ರಮಾಣ ಕಳೆದು ಉಳಿದ ರಾತ್ರಿಯ ಪ್ರಮಾಣಗಳಿಗೆಯನ್ನು ಎಂಟು ಭಾಗಮಾಡಿ ಅದರಲ್ಲಿ ಐದು ಭಾಗವನ್ನು ಆ ದಿನಕ್ಕೂ ಮೂರು ಭಾಗವನ್ನು ಮುಂದಿನ ದಿನಕ್ಕೂ ಸೇರಿದೆ ಎಂತ ತಿಳಿಯಬೇಕು. ಅಂದರೆ ದಿವಾ ಪ್ರಮಾಣ ೩೦ ಇರುವಾಗ ೬೦ ರಲ್ಲಿ ೩೦ ಕಳೆದು ಉಳಿದ ಗಳಿಗೆ ೩೦x೫ ÷ 8 = ೧೮-೪೫ ಇದನ್ನು ದಿವಾಮಾನಕ್ಕೆ ಸೇರಿಸಿದರೆ ೪೮-೪೫. ಇದರ ವಳಗೆ ಆಶೌಚ ಬಂದರೆ

ಆದಿನದಿಂದಲೇ ಆಶೌಚ ಗಣನೆ ಮಾಡಬೇಕು. ೪೮-೪೫ ರ ಮೇಲೆ ಆಶೌಚ ಬಂದರೆ ಮುಂಧಿನ ದಿನದಿಂದ ದಿನಗಣನೆ ಮಾಡಬೇಕು.

## ಸಪಿಂಡಕರು ಸಮಾನೋದಕರು

ಮೂಲ ಪುರುಷನಿಂದ ಏಳುತಲೆ ಮಾರಿನವರು ಅವರ ಸಂತಾನ ಇವರೆಲ್ಲರೂ ಸ ಪಿಂಡರು, ಆಮೇಲಿನ, ಆ ಹಿಂದಿನ ಏಳು ತಲೆಮಾರಿನವರು ಅವರ ಸಂತಾನ ಸಮಾನೋದಕರು. ಅದರ ಹಿಂದು ಮುಂದಿನ ಏಳು ತಲೆಯವರು ಸಗೋತ್ರರು.

## ಆಶೌಚ

ಸಾಮಾನ್ಯವಾಗಿ ಸ ಪಿಂಡರಿಗೆ ಪರಸ್ಪರ ಹತ್ತುದಿನ ಆಶೌಚ, ಸಮಾನೋದಕರಿಗೆ ಮೂರು ದಿನ. ಸಗೋತ್ರರಿಗೆ ಸ್ನಾನ ಮಾತ್ರ. ಕಲಿಯುಗದಲ್ಲಿ ಎಲ್ಲ ವರ್ಣದವರಿಗೂ ಇದು ಸಮಾನ. ರಜಸ್ವಲೆಗೆ ಮೂರು ದಿನ. ಗರ್ಭಿಣಿಗೆ ಮೂರು ತಿಂಗಳ ವಳಗೆ ಗರ್ಭ ಸ್ರಾವವಾದರೆ ಮೂರು ದಿನ. ನಾಲ್ಕನೇ ತಿಂಗಳಲ್ಲಿ ಗರ್ಭ ಸ್ರಾವವಾದರೆ, ಐದು, ಆರನೇ ತಿಂಗಳಲ್ಲಿ ಗರ್ಭಪಾತವಾದರೆ ಕ್ರಮವಾಗಿ 4. 5. 6. ದಿನಗಳು ಆಶೌಚ. ಏಳು ತಿಂಗಳಿಂದ ಪ್ರಸವವೆನಿಸುವುದರಿಂದ ಮಗು ಹುಟ್ಟಿ ಸಾಯಲಿ. ಗರ್ಭದಲ್ಲೇ ಸತ್ತಿರಲಿ ಎಲ್ಲಾ ಸಪಿಂಡರಿಗೂ ಹತ್ತು ದಿನ ಆಶೌಚ, ಹೆಣ್ಣು ಮಗುವನ್ನು ಹಡೆದ ಸ್ತ್ರೀಗೆ ನಲವತ್ತು ದಿನ, ಗಂಡು ಮಗು ಹಡೆದ ಸ್ತ್ರೀಗೆ ಮೂವತ್ತು ದಿನಗಳವರೆಗೂ ಕರ್ಮಾಧಿಕಾರವಿಲ್ಲ. ಆದರೆ ಇದು ಜಾತಕರ್ಮ ನಾಮ ಕರ್ಮ ಮೊದಲಾದ ನಿತ್ಯ ನೈಮಿತ್ತಿಕ ಕರ್ಮಗಳನ್ನು ಬಿಟ್ಟು ಕಾಮ್ಯ ಕರ್ಮಗಳಿಗೆ ಮಾತ್ರ ಅನ್ವಯಿಸುತ್ತದೆ.

## ಕರ್ಮಾನುಷ್ಠಾನ

ಆಶೌಚದಲ್ಲಿ ಅಮಂತ್ರಕ ಪ್ರಾಣಾಯಾಮ, ಮಾನಸಿಕ ಸಂಧ್ಯಾ ಅರ್ಘ್ಯ ಪ್ರದಾನ ಜಪ ಹೊರತು ಅಧ್ಯಯನ,ಅಧ್ಯಾಪನ, ಯಜನ, ಯಾಜನ ದಾನ, ಪ್ರತಿ ಗ್ರಹಗಳಲ್ಲಿ ಆಶೌಚಿಗಳಿಗೆ ಅಧಿಕಾರವಿಲ್ಲ. ಪುತ್ರ ಜನನ ನಿಮಿತ್ತ ಜಾತಕರ್ಮ ಸಂಸ್ಕಾರ, ದಾನಾದಿಗಳನ್ನು ಸ್ನಾನ ಮಾಡಿಕೊಂಡು ಮಾಡಬೇಕು.



## ಸಂಪರ್ಕಾಶೌಚ

ಆಶೌಚ ಉಳ್ಳವರು ಬೇರೆ ಆಶೌಚ ಉಳ್ಳವರ, ಅಥವಾ ಆಶೌಚ ವಿಲ್ಲದವರನ್ನು ಮುಟ್ಟಿ ಕೊಳ್ಳಬಾರದು. ಆಶೌಚ ಉಳ್ಳವರ ಅನ್ನ ಊಟ ಮಾಡಿ ಅಲ್ಲೇ ವಾಸ ಮಾಡಿಕೊಂಡಿದ್ದರೆ ಅವರ ಆಶೌಚವನ್ನು ಪೂರ್ಣವಾಗಿ ಪಾಲಿಸಬೇಕು. ಆಶೌಚ ಉಳ್ಳವರ ವಸ್ತುಗಳಿಗೂ ಆಶೌಚವಿರುವುದರಿಂದ ಅವರ ಪದಾರ್ಥಗಳನ್ನು ಉಪಯೋಗಿಸಬಾರದು. ಆದರೆ ಸಂಪರ್ಕಾಶೌಚ ಮತ್ತು ಮುಂದೆ ಹೇಳುವ ಅತಿಕ್ರಾಂತಾಶೌಚವು ಅವರಿಗೆ ಮಾತ್ರ, ಅವರ ವಸ್ತುಗಳಿಗೆ ಆಶೌಚವಿರುವುದಿಲ್ಲ. ಜಾತಾಶೌಚದಲ್ಲಿ ತಂದೆ ಮತ್ತು ತ್ರಿಪುರುಷ ಸಪಿಂಡರಿಗೆ, ಮೂರು ದಿನ ಅಸ್ಪೃಶ್ಯತ್ವವಿದೆ. ಅವಳಿಗೆ ಮಕ್ಕಳಾದರೆ ತಂದೆಗೆ ಹತ್ತು ದಿನ ಅಸ್ಪೃಶ್ಯತ್ವವಿದೆ ಎನ್ನುವ, ಸಪಿಂಡರಿಗೂ ಹತ್ತು ದಿನ ಅಸ್ಪೃಶ್ಯತ್ವ ವಿದೆ ಎನ್ನುವ ಶಾಸ್ತ್ರಗಳಿದ್ದರೂ ಅದು ಎಲ್ಲಾ ಕಡೆ ಆಚರಣೆಯಲ್ಲಿಲ್ಲ.

## ಮೃತಾಶೌಚ

ಹುಟ್ಟಿದ ಮಗುವು ಹತ್ತು ದಿನಗಳ ವಳಗೆ ಮೃತಿ ಹೊಂದಿದರೆ ಮೃತಾಶೌಚವಿಲ್ಲ. ಜಾತಾ ಶೌಚ ಮಾತ್ರ, ಆದರೆ ಶಿಶು ಮರಣದಿನದಿಂದ ಆರಂಭಿಸಿ ತಂದೆ ತಾಯಿಗಳಿಗೆ ಹತ್ತು ದಿನ ಮೃತಾ ಶೌಚವಿದೆ ಎನ್ನುವ ಶಾಸ್ತ್ರವೂ ಇದೆ. ಹತ್ತನೇ ದಿನ ರಾತ್ರಿ ಶಿಶು ಮರಣ ಹೊಂದಿದರೆ ಮತ್ತೆರಡು ದಿನ, ಪ್ರಭಾತದಲ್ಲಿ ಮರಣವಾದರೆ ಮತ್ತೆ ಮೂರು ದಿನ ಆಶೌಚ ಪಾಲಿಸಬೇಕು ತಂದೆ ತಾಯಂದಿರು. ಎನ್ನುವ ವಚನವೂ ಇದೆ.

ನಾಮಕರಣದಿಂದ ಅಥವಾ ಹನ್ನೊಂದನೇ ದಿನದಿಂದ ಶಿಶುಮರಣ ವಾದರೆ ತಂದೆ ತಾಯಂದಿರಿಗೂ ಸೋದರ ಸೋದರಿಯರಿಗೂ ಹತ್ತು ದಿನ ಆಶೌಚವಿದೆ. ಸಪಿಂಡರಿಗೆ ಈ ಮೃತಾಶೌಚವಿಲ್ಲ. ಹಲ್ಲು ಹುಟ್ಟುವ ಮುಂಚೆ ಅಥವಾ ಆರು ತಿಂಗಳೊಳಗೆ ಶಿಶು ಮೃತವಾದರೆ ಸಪಿಂಡರಿಗೆ ಸ್ನಾನ ಮಾತ್ರ. ದಹನ ಮಾಡಿದರೆ ಒಂದು ದಿನ ಆಶೌಚವಿದೆ. ಆನಂತರ ಚೂಡಾಕರ್ಮ

ಅಥವಾ ಮೂರು ವರ್ಷದೊಳಗೆ ಮೃತವಾದರೆ ಸಪಿಂಡರಿಗೆ ಒಂದು ದಿನ. ದಹನ ಮಾಡಿದರೆ ಮೂರು ದಿನ. ಮೂರು ವರ್ಷ ಅಥವಾ ಚೂಡಾಕರ್ಮದ ನಂತರ ಸಪಿಂಡರಿಗೆ ಮೂರು ದಿನ. ಮೂರು ವರ್ಷದ ನಂತರ ದಹನ ಕಡ್ಡಾಯ. ಅಲ್ಲಿಯ ವರೆಗೆ ದಹನ ಖನನ ವಿಕಲ್ಪ.

## ಕನ್ಯಾಮೃತಿಯಲ್ಲಿ

ಕನ್ಯಾಮೃತಿಯಲ್ಲಿ ಸಪ್ತ ಪುರುಷ ಸಾಪಿಂಡ್ಯವಿಲ್ಲ. ತ್ರಿಪುರುಷ ವೆನ್ನುವ ಪಕ್ಷವಿಟ್ಟುಕೊಂಡು ನಾಲ್ಕನೇ ತಲೆಮಾರಿನವರು ಆಶೌಚ ಪಾಲಿಸುತ್ತಿಲ್ಲ. ನಾಮಕರಣದನಂತರ ಹಲ್ಲು ಹುಟ್ಟುವ ಮುಂಚೆ ಅಥವಾ ಆರು ತಿಂಗಳೊಳಗೆ ಕನ್ಯಾ ಮೃತಿಯಲ್ಲಿ ಸಪಿಂಡರಿಗೆ ಆಶೌಚವಿಲ್ಲ. ದಹನ ಮಾಡಿದರೆ ಒಂದು ದಿನ. ಆನಂತರ ಮೂರು ವರ್ಷದೊಳಗೆ ಕನ್ಯಾ ಮೃತವಾದರೆ ದಹನ ಮಾಡಿದರೆ ಸಪಿಂಡರಿಗೆ ಒಂದು ದಿನ. ಖನನವಾದರೆ ಸ್ನಾನಮಾತ್ರ. ಆನಂತರ ವಾಗ್ದಾನ, ಗರ್ಭಾಷ್ಟಮ ಅಥವಾ ಹತ್ತು ವರ್ಷದೊಳಗೆ ಮೃತವಾದರೆ ಒಂದು ದಿನ. ಆನಂತರ ವಿವಾಹದವರೆಗೆ ಸಪಿಂಡರಿಗೆ ಮೂರು ದಿನ. ವಾಗ್ದಾನವಾಗಿದ್ದರೆ ಗಂಡನ ಸಪಿಂಡರಿಗೂ ಮೂರು ದಿನ. ವಿವಾಹದನಂತರ ವರನ ಸಪಿಂಡರಿಗೆ ಮಾತ್ರ ಹತ್ತು ದಿನ. ವಿವಾಹವಾಗದೆ ರಜಸ್ವಲೆಯಾಗಿ ಮೃತರಾದರೆ ತಂದೆ ಮತ್ತು ಸಪಿಂಡರಿಗೆ ಹತ್ತು ದಿನಾಶೌಚ.

## ದಶಾಹಾಶೌಚ

ಗರ್ಭಾಷ್ಟಮ ಅಥವಾ ಉಪನಯನದ ನಂತರ ಮೃತರಾದರೆ ಎಲ್ಲ ಸಪಿಂಡರಿಗೂ ದಶಾಹಾಶೌಚ. ಇದು ಕಲಿಯುಗದಲ್ಲಿ ಎಲ್ಲಾ ವರ್ಣದವರಿಗೂ ಸಮಾನ. ಒಂದು ಆಶೌಚದ ಮಧ್ಯೆ ಮತ್ತೊಂದು ಆಶೌಚ ಬಂದರೆ ಉಳಿದ ದಿನಗಳ ಕಾಲವನ್ನು ಪಾಲಿಸಿದರೆ ಸಾಕು. ಇಲ್ಲಿ ಮೊದಲು ಬಂದ ಆಶೌಚವನ್ನು ಆನಂತರ ಕೇಳಿದರೂ ಮೊದಲು ಬಂದ ಆಶೌಚದಿಂದಲೇ ಆಶೌಚ ನಿವೃತ್ತಿಯೇ ಹೊರತು ಕೇಳುವುದು ಮುಖ್ಯವಲ್ಲ.



## ಅತಿಕ್ರಾಂತಾಶೌಚ

ಹತ್ತು ದಿನಗಳ ಆಶೌಚ ಮಧ್ಯದಲ್ಲಿ ಆಶೌಚ ಶ್ರವಣವಾದರೆ ಉಳಿದ ದಿನಗಳ ಕಾಲ ಆಶೌಚ ಪಾಲಿಸಿದರೆ ಸಾಕು. ಕೇಳಿದ ದಿನದಿಂದ ಹತ್ತು ದಿನ ಆಶೌಚ ಪಾಲಿಸಬೇಕಿಲ್ಲ.

## ಅತಿಕ್ರಾಂತಾಶೌಚ

ಹತ್ತನೇ ದಿನ ರಾತ್ರಿ ಮತ್ತೊಂದು ಆಶೌಚ ಬಂದರೆ ಮತ್ತೆರಡು ದಿನ ಆಶೌಚವನ್ನು, ಅರುಣೋದಯ (ಪ್ರಭಾತ) ಕಾಲದಲ್ಲಿ ಶ್ರವಣವಾದರೆ ಮತ್ತೆ ಮೂರು ದಿನ ಆಶೌಚವನ್ನು ಹೆಚ್ಚಿಗೆ ಪಾಲಿಸಬೇಕು. ಪ್ರಭಾತ ಕಾಲದಲ್ಲಿ ಶ್ರವಣವಾದರೆ ಎರಡು ದಿನ, ಪ್ರಾತಃ ಕಾಲದಲ್ಲಿ ಶ್ರವಣವಾದರೆ ಮೂರು ದಿನಎನ್ನುವ ವಚನವೂ ಇದೆ. ಹತ್ತು ದಿನಗಳ ನಂತರ ಮೂರು ತಿಂಗಳೊಳಗೆ ಹಿಂದೆ ಆದ ಮರಣ ಶ್ರವಣವಾದರೆ ಮೂರು ದಿನ, ಆರು ತಿಂಗಳೊಳಗೆ ಕೇಳಿದರೆ ಒಂದೂವರೆ ದಿನ (ಪಕ್ಷಿಣೀ) ಆನಂತರ ವರ್ಷದೊಳಗೆ ಶ್ರವಣವಾದರೆ ಒಂದು ದಿನ, ಆಮೇಲೆ ಸ್ನಾನ ಮಾತ್ರ. ಆರು ತಿಂಗಳಿಂದ ವರ್ಷದವರೆಗೂ ಒಂದು ದಿನ. ಆಮೇಲೆ ಸ್ನಾನ ಮಾತ್ರ; ಎನ್ನುವ ವಚನವೂ ಇದೆ. ಈ ಅತಿಕ್ರಾಂತಾಶೌಚ ದೇಶಾಂತರಕ್ಕಿಲ್ಲ. ಎನ್ನುವ ಪ್ರಮಾಣವೂ ಇದೆ. ಈ ಅತಿಕ್ರಾಂತಾಶೌಚ ವ್ಯಕ್ತಿಗಳಿಗೆ ಮಾತ್ರ. ಅವರ ದ್ರವ್ಯಕ್ಕೆ ಆಶೌಚವಿರುವುದಿಲ್ಲ. ಈ ಅತಿಕ್ರಾಂತಾಶೌಚ ; ದಶಾಹ ಮೃತಾಶೌಚಕ್ಕೆ ಮಾತ್ರ. ಜಾತಾಶೌಚದಲ್ಲಿ ಅತಿಕ್ರಾಂತಾಶೌಚವಿಲ್ಲ. ತಾಯಿ ತಂದೆ ಸೋದರರಿಗೆ ದಶೌಹಾಶೌಚವಿರುವುದರಿಂದ ಈ ಅತಿಕ್ರಾಂತಾಶೌಚವೂ ಇದೆ. ತ್ರಿದಿನ. ಪಕ್ಷಿಣೀ ಏಕಾಹಾಶೌಚಿಗಳಿಗೆ ಅತಿಕ್ರಾಂತಾಶೌಚವಿಲ್ಲ. ಪುತ್ರರು ದಶಾಹಕ್ರಿಯೆ ಮಾಡಬೇಕಾದ್ದರಿಂದ ಯಾವಾಗ ಸಂಸ್ಕಾರ ಮಾಡಿದರೂ ಸಂಸ್ಕಾರ ದಿನದಿಂದ ದಶಾಹಾಶೌಚ ಪಾಲಿಸಬೇಕು.

ಸಂಸ್ಕಾರವಾಗದ ಮಾತಾಪಿತೃ ವಿಷಯದಲ್ಲಿ ಅಸ್ಥಿದಾಹವನ್ನೋ ಪ್ರತಿಕೃತಿ ದಾಹವನ್ನೋ ಮಾಡಿಕೊಂಡು ದಶಾಹಾಶೌಚಪಾಲಿಸಬೇಕು. ಸಪಿಂಡರು ಹಿಂದೆ

ದಶಾಹಾಶೌಚ ಪಾಲಿಸಿದ್ದರೆ ಒಂದು ದಿನ, ಹಿಂದೆ ಪಾಲಿಸದಿದ್ದರೆ ಮೂರು ದಿನ ಆಶೌಚ ಪಾಲಿಸಬೇಕು. ಪುತ್ರರನ್ನು ಬಿಟ್ಟು ಬೇರೆಯವರು ಕ್ರಿಯೆ ಮಾಡಿದ್ದರೆ ಹಿಂದೆ ಆಶೌಚ ಪಾಲಿಸಿದ್ದರೂ ಸಪಿಂಡರು ಈಗ ಮೂರು ದಿನ ಆಶೌಚವನ್ನು ಪಾಲಿಸಬೇಕು. ಪುತ್ರರಿಗೆ ದಶಾಹಾಶೌಚ. ಒಂದು ವರ್ಷದ ನಂತರ ಪುತ್ರರು ಸಂಸ್ಕಾರ ಮಾಡುವುದಾದರೆ ಸಪಿಂಡರಿಗೆ ಆಶೌಚವಿಲ್ಲ. ಪುತ್ರರಿಗೆ ಮಾತ್ರ ಹತ್ತು ದಿನ. ಮೂರು ದಿನವೆಂಬ ಪಕ್ಷವೂ ಇದೆ. ಈ ನ್ಯಾಯ ಗಂಡ ಹೆಂಡರಿಗೂ ಪರಸ್ಪರ ಸಂಸ್ಕಾರ ಕರ್ತೃತ್ವ ಬಂದರೂ ಅನ್ವಯಿಸುತ್ತದೆ. ಅಸ್ಥಿ ಸಂಚಯನಕ್ಕಿಂತ ಮೊದಲು ಮಾತಾಪಿತೃ ಮೃತಿ ಶ್ರವಣವಾದರೆ ಉಳಿದ ಆಶೌಚ ದಿನದಿಂದ ಶುದ್ಧಿ. ಅಸ್ಥಿಸಂಚಯನದ ನಂತರ ಶ್ರವಣವಾದರೆ ಪುತ್ರ ಮತ್ತು ಪತ್ನಿಗೆ ಹತ್ತು ದಿನ ಆಶೌಚವೆನ್ನುವ, ನಾಲ್ಕು ದಿನಗಳೊಳಗೆ ಶ್ರವಣವಾದರೆ ಉಳಿದ ದಿನಗಳಿಂದಲೇ ಶುದ್ಧಿ, ಆನಂತರ ಶ್ರವಣವಾದರೆ ಹತ್ತು ದಿನವೆನ್ನುವ ಪಕ್ಷಗಳೂ ಇವೆ. ಸಪತ್ನೀ ಮಾತೃ ಮರಣದಲ್ಲಿ ಔರಸ ಪುತ್ರರಿದ್ದರೆ ಸಪತ್ನೀಪುತ್ರರಿಗೆ ವರ್ಷದೊಳಗೆ ಶ್ರವಣವಾದರೆ ಹತ್ತು ದಿನ. ಆಮೇಲೆ ಶ್ರವಣವಾದರೆ ಮೂರು ದಿನ ಆಶೌಚ, ಪತ್ನೀ ಮರಣವನ್ನು ವರ್ಷದೊಳಗೆ ಕೇಳಲೀ ಆಮೇಲೆ ಕೇಳಲೀ ಹತ್ತು ದಿನ ಆಶೌಚ. ಪತಿಯ ಮರಣದಲ್ಲಿ ಪತ್ನಿಗೂ ಇದೇ ನ್ಯಾಯ. ಮಾತಾಪಿತೃಗಳಿಗೆ ಸಂಸ್ಕಾರ ಕ್ರಿಯೆ ಆಗದಿರುವಾಗ ಹತ್ತು ದಿನಗಳ ಮೇಲೆ ಮಕ್ಕಳು ಅಸ್ಥಿ ದಹನವನ್ನೋ ಪ್ರತಿಕೃತಿ ದಹನವನ್ನೋ ಆರಂಭಿಸಿದಲ್ಲಿ ಹಿಂದೆ ದಶಾಹಾಶೌಚ ಪಾಲಿಸಿದ್ದರೆ ತ್ರಿರಾತ್ರ, ಪಾಲಿಸದಿದ್ದಲ್ಲಿ ದಶಾಹಾಶೌಚ. ಸಪಿಂಡರಿಗೆ ಹಿಂದೆ ಆಶೌಚಪಾಲಿಸಿದ್ದರೆ ಪುನಃ ಆಶೌಚವಿಲ್ಲ. ಮಕ್ಕಳ ಹೊರತು ಬೇರೆ ಸಪಿಂಡರು ಕ್ರಿಯಾ ಕರ್ತೃಗಳಾಗಿದ್ದರೆ ಹಿಂದೆ ಆಶೌಚಾನುಷ್ಠಾನ ಮಾಡಿದ್ದರೆ ಕ್ರಿಯಾ ನಿಮಿತ್ತ ಮೂರು ದಿನ ಆಶೌಚ. ಇತರ ಸಪಿಂಡರಿಗೆ ಹಿಂದೆ ಆಶೌಚ ಪಾಲಿಸಿದ್ದರೆ ಪುನಃ ಆಶೌಚವಿಲ್ಲ.

ಹಿಂದೆ ಆಶೌಚ ಪಾಲಿಸಿದ್ದರೂ ಹತ್ತು ದಿನಗಳ ನಂತರ ಪುತ್ರನು ಕ್ರಿಯೆ ಮಾಡುವುದಾದರೆ ಪುನಃ ಹತ್ತು ದಿನ ಆಶೌಚ ಪಾಲಿಸಬೇಕೆನ್ನುವುದು



ವೈದ್ಯನಾಥರ ಅಭಿಪ್ರಾಯ. ವರ್ಷದ ನಂತರ ಯಾರೇ ಸಂಸ್ಕಾರ ಮಾಡಲಿ ಸಂಸ್ಕಾರ ಮಾಡುವವರಿಗೆ ಮಾತ್ರ ಮೂರು ದಿನ. ಬೇರೆ ಸಪಿಂಡರಿಗೆ ಆಶೌಚವಿಲ್ಲ. ಆದರೆ ಮಾತಾಪಿತೃ ಮೃತಿಯಲ್ಲಿ ಯಾವಾಗಲೇ ಶ್ರವಣವಾಗಲೀ ಕ್ರಿಯೆ ನಡೆಯದೇ ಇದ್ದಲ್ಲಿ ಹತ್ತು ದಿನ ಆಶೌಚ. ದಶಾಹಾನಂತ ಪತಿಗೆ ಸಂಸ್ಕಾರವಾಗುವುದಾದರೆ ಪತ್ನಿಗೂ ಪತ್ನಿಗೆ ಸಂಸ್ಕಾರವಾಗುವಾಗ ಪತಿಗೂ ದಶಾಹಾಶೌಚ. ಸವತಿಯರಿಗೂ ಪರಸ್ಪರ ಸಂಸ್ಕಾರ ಕರ್ತೃತ್ವ ಬಂದರೆ ಇದೇ ನಿಯಮ.

ಜ್ಯೇಷ್ಠ ಪುತ್ರನಿಂದ ಸಂಸ್ಕಾರವಾಗಿದ್ದು ವರ್ಷದನಂತರ ಕನಿಷ್ಠಪುತ್ರರು ಮಾತಾಪಿತೃಗಳ ಮೃತಿಯನ್ನು ಕೇಳಿದರೆ ಹತ್ತು ದಿನಾಶೌಚ ವೆಂದಿದೆ. ಕೆಲವರು ಮೂರು ದಿವವೆನ್ನುತ್ತಾರೆ. ಆದರೆ ಎಲ್ಲ ಮಕ್ಕಳೂ ಕ್ರಿಯೆಯನ್ನು, ಸಪಿಂಡೀಕರಣವನ್ನು ಮಾಡಬೇಕು ಎನ್ನುವ ಶಾಸ್ತ್ರ ಪಾಲಿಸುವ ಮಕ್ಕಳು ಜ್ಯೇಷ್ಠ ಕನಿಷ್ಠ ಭೇದವಿಲ್ಲದೆ ಹತ್ತು ದಿನಾ ಶೌಚ ಪಾಲಿಸಬೇಕು. ಪ್ರೇತಪದ ಉಚ್ಚಾರ ಮಾಡದೆ ಉದಕ ದಾನಾದಿ ಸಂಸ್ಕಾರ ವೆಲ್ಲವನ್ನೂ ಮಾಡಬೇಕು. ಕನಿಷ್ಠ ಪುತ್ರರಿಂದ ಕ್ರಿಯೆಯಾಗಿದ್ದು ವರ್ಷಮಧ್ಯೆ ಅಥವಾ ಅನಂತರ ಜ್ಯೇಷ್ಠನಿಗೆ ಮೃತಿ ಶ್ರವಣವಾದರೆ ದಶಾಹಾಶೌಚ. ಪ್ರೇತ ಪದೋಚ್ಚಾರ ಮಾಡದೆ ಉದಕ ದಾನ ಸಪಿಂಡೀಕರಣ (ಪಿಂಡಸಂಯೋಜನೆ ಇಲ್ಲದೆ) ವನ್ನು ಮಾಡಬೇಕು. ಪುತ್ರೀ ಕರ್ತೃವಾದರೂ ಪುತ್ರರಂತೆ ದಶಾಹಾದಿ ಆಶೌಚ, ಕ್ರಿಯೆ, ಎಲ್ಲವನ್ನು ಪಾಲಿಸಬೇಕು.

ಪುತ್ರೀ ಕ್ರಿಯಾಕರ್ತಳಾದರೆ ಸಮಂತ್ರಕವಾಗಿ ದಹನ ಮಾಡಿ ಉಳಿದದ್ದನ್ನ ಋತ್ವಿಜರು ಮೊದಲಾದವರಿಂದ ಮಾಡಿಸಬೇಕು. ಅಪಸವ್ಯಅಧಃ ಶಯ್ಯಾದಿ ನಿಯಮಗಳೆಲ್ಲವೂ ಮುಖ್ಯಕರ್ತೃವಿಗೆ ಮಾತ್ರ. ಬಂಧುಗಳೇ ಪ್ರತಿನಿಧಿಯಾದಲ್ಲಿ ಅಪಸವ್ಯಾದಿ ನಿಯಮಗಳನ್ನೆಲ್ಲಾ ಪ್ರತಿನಿಧಿಯೂ ಪಾಲಿಸಬೇಕು. ವತ್ಸರಾನಂತರ ಪುತ್ರ ಭಿನ್ನರು ಕರ್ತೃವಾದರೆ ಕರ್ತೃವಿಗೆ ಮಾತ್ರ ಕ್ರಿಯಾ ನಿಮಿತ್ತ ತ್ರಿದಿನಾ ಶೌಚ. ಮೊದಲ ದಿನ ದಶಾಹಕೃತ್ಯ, ಎರಡನೇ ದಿನ ಸಂಚಯನ, ಏಕೋದ್ದಿಷ್ಟ, ಮೂರನೇ ದಿನ ಸಪಿಂಡೀಕರಣ.

ಸಪಿಂಡೀಕರಣವಾಗುವವರೆಗೂ ಸಂಧ್ಯಾವಂದನೆ ಔಪಾಸನ, ವೈಶ್ವದೇವ ಪಂಚಮಹಾಯಜ್ಞ, ದೇವಪೂಜಾ, ಪಿತ್ರಾದಿಗಳ ಮಾಸಿಕ, ಸಾಂವತ್ಸರಿಕ ಶ್ರಾದ್ಧ ಗ್ರಹಣ ಶ್ರಾದ್ಧ ಇವುಗಳನ್ನು ಬಿಟ್ಟು ಬೇರೆ ನಿತ್ಯ ನೈಮಿತ್ತಿಕ ಕಾಮ್ಯ ಕರ್ಮಗಳಲ್ಲಿ ಅಧಿಕಾರವಿಲ್ಲ. ಆದರೆ ಅಸ್ಪೃಶ್ಯತ್ವವಿರುವುದಿಲ್ಲ.

## ದರ್ಶಾದಿ ಅವಶ್ಯಕರಣೀಯ

ಮಾತಾಪಿತೃಮೃತಿವರ್ಷದಲ್ಲಿ, ಮಾತಾಪಿತೃಮೃತಿ ದಿನದಲ್ಲಿ ಮೃತರಾದವರಿಗೆ ಸಂಸ್ಕಾರ ಮಾಡಿದರೂ ಸಪಿಂಡೀಕರಣ ಮಾಡಬಾರದು. ವರ್ಷದ ನಂತರ ಮಾಸಿಕಾದಿಗಳನ್ನು ಸೇರಿಸಿ ಸಪಿಂಡೀಕರಣ ಮಾಡಬೇಕು. ಆದರೆ ತನ್ನ -ಪತ್ನೀ-ಮಾತೃ, ಸೋದರ ಸೋದರನಪುತ್ರ - ತನ್ನ ಪುತ್ರ ಸೊಸೆ ಅಕ್ಕತಂಗಿಯರು ಇವರಿಗೆ ಮಾತ್ರ ವರ್ಷ ಮಧ್ಯದಲ್ಲೂ ಸಪಿಂಡೀಕರಣಾದಿಗಳನ್ನು ಮಾಡಬಹುದು.

ಹಾಗೆಯೇ ವರ್ಷ ಮಧ್ಯದಲ್ಲಿ ದರ್ಶ-ಮಹಾಲಯ ಶ್ರಾದ್ಧಗಳನ್ನು, ಜಾತಕರ್ಮಾದಿ ಅನ್ನಪ್ರಾಶನಾಂತ ಶುಭ ಸಂಸ್ಕಾರಗಳನ್ನು ಮಾಡಬಹುದು.

ಅಸ್ಥಿಸಂಚಯನಕ್ಕಿಂತ ಮೊದಲು ಮಾತಾಪಿತೃಮೃತಿ ಶ್ರವಣದಲ್ಲಿ ಉಳಿದ ಆಶೌಚ ದಿನದಿಂದಲೇ ಶುದ್ಧಿ. ಸಂಚಯನದ ನಂತರ ಶ್ರವಣವಾದರೆ ಪುತ್ರ ಮತ್ತು ಮೃತನ ಪತ್ನೀಗೆ ಶ್ರವಣಾದಿ ದಶಾಹಾಶೌಚ. ಅಸ್ಥಿಸಂಚಯನ ಎರಡು-ಮೂರು ನಾಲ್ಕು ಐದು ಏಳನೇ ದಿನಗಳಲ್ಲಿ ಒಂಭತ್ತನೇ ದಿನಕ್ಕಿಂತ ಮೊದಲು ಆಗಬೇಕು. ಮೂರನೇ ದಿವಸದೊಳಗೆ ಮುಖ್ಯ ಆರನೇ ದಿವಸದೊಳಗೆ ಮಧ್ಯಮ ಒಂಭತ್ತನೇ ದಿವಸದೊಳಗೆ ಅಧಮ ಪಕ್ಷ.

ದಶಾಹದೊಳಗೆ ಶ್ರವಣವಾದರೆ ಸಂಚಯನ ಆಗಲೀ ಆಗದಿರಲಿ ದಶಾಹಶೇಷದಿಂದಲೇ ಶುದ್ಧಿ ಎನ್ನುವುದು ಮಾಧ್ವಾದಿ ಕೆಲವರ ಮತ.

ಸಪತ್ನೀ ಮಾತೃ ಮರಣದಲ್ಲಿ ಸಂಸ್ಕಾರವಾಗದೆ ವರ್ಷದ ನಂತರ ಮೃತಿ ಶ್ರವಣವಾದರೆ ತ್ರಿದಿನಾಶೌಚ. ವರ್ಷದೊಳಗೆ ಶ್ರುತವಾದರೆ ದಶಾಹಾಶೌಚ.



ಸಂಸ್ಕಾರವಾಗಿದ್ದರೆ ವರ್ಷದ ನಂತರ ಒಂದು ದಿನ. ವರ್ಷದೊಳಗೆ ಶ್ರುತವಾದರೆ ಕ್ರಿಯೆ ಆಗಲಿ ಆಗದಿರಲಿ ದಶಾಹಾಶೌಚ. ತ್ರಿದಿನಾಶೌಚವೆಂದು ಕೆಲವರ ಅಭಿಪ್ರಾಯವಿದೆ. ಪತಿಯ ಮರಣದಲ್ಲಿ ವತ್ಸರದನಂತರ ಶ್ರವಣವಾದರೆ ಪತ್ನಿಗೆ ದಶಾಹ. ಪತಿಗೆ ಕ್ರಿಯೆ ನಡೆದಿದ್ದಲ್ಲಿ ಮೂರು ದಿನಾಶೌಚ.

## ಸಮಾನೋದಕರಿಗೆ

ಜನನಾಶೌಚ, ಮೃತಾಶೌಚ ಮೂರು ದಿನ. ಸಮಾನೋದಕರಿಗೆ ಜನನಾಶೌಚವಿಲ್ಲವೆಂದು ಕೆಲವರ ಮತ. ಉಪನಯನಕ್ಕಿಂತ ಮೊದಲು ಮೃತರಾದವರ ಬಗ್ಗೆ ಸ್ನಾನ ಮಾತ್ರ. ತ್ರಿದಿನಾಶೌಚ ಮಾಡಬೇಕಾಗಿಲ್ಲ. ಇಲ್ಲಿ ಅತಿಕ್ರಾಂತಾಶೌಚವಿಲ್ಲ . ಕನ್ಯಾಮೃತಿಯಲ್ಲಿ ವಿವಾಹವಾಗಲೀ ಆಗದಿರಲಿ ಸಮಾನೋದಕರಿಗೆ ಸ್ನಾನ ಮಾತ್ರ.

## ಗ್ರಾಮಾಶೌಚ

ಗ್ರಾಮದಲ್ಲಿ ಶವವಿರುವವರೆಗೂ ಗ್ರಾಮಾಶೌಚ ವಿರುವುದರಿಂದ ಹೋಮ ಪೂಜಾ ಭೋಜನಾದಿಗಳಿಗೆ ನಿಷೇಧವಿದೆ. ನಾನೂರು ಬ್ರಾಹ್ಮಣ್ಯವಿರುವ ಗ್ರಾಮವಾದರೆ ಆ ಬೀದಿಗೆ ಮಾತ್ರ ಆಶೌಚ. ಪಟ್ಟಣ ನಗರ ರಾಜಧಾನಿಗಳಲ್ಲಿ ಆ ಮನೆಗೇ ಹೊರತು ಬೀದಿಗೆಲ್ಲ ಆಶೌಚವಿಲ್ಲ. ಇಪ್ಪತ್ತೊಂದು ಮನೆಗಿಂತ ಕಡಿಮೆ ಇರುವ ಗ್ರಾಮವಾದರೆ ಹನ್ನೊಂದು ಮಾರುಗಳಿಗಿಂತ ದೂರವಿದ್ದರೂ ಆಶೌಚವಿದೆ. ನಾನೂರು ಬ್ರಾಹ್ಮಣ್ಯವಿದ್ದರೆ ಹನ್ನೊಂದು ಮಾರಿನವರೆಗೆ ಆಶೌಚ. ಬೇರೆ ಬೀದಿಯಾದರೆ ಆಶೌಚವಿಲ್ಲ. ಪೂಜಾದಿ ಕಾರ್ಯ ಆರಂಭವಾಗಿದ್ದರೆ ಅಮಂತ್ರಕವಾಗಿ ಮುಗಿಸಬೇಕು. ಪ್ರತಿಷ್ಠಾದಿಕಾರ್ಯ ನಡೆಯುತ್ತಿದ್ದರೆ ಶವವನ್ನು ಹೊರ ಸಾಗಿಸಿ ಪ್ರತಿಷ್ಠಾದಿ ಕಾರ್ಯವನ್ನು ಮುಂದುವರಿಸಬೇಕು. ಶವದಹನವಾಗುವವರೆಗೂ ಪೂಜೆಯನ್ನು ಅಮಂತ್ರಕವಾಗಿ ಮಾಡಬೇಕು.

ನಗರದಲ್ಲಾದರೆ ಆ ಮನೆಯಿಂದ ಮೂವತ್ತು ಧನುಸ್ಸಿನ ಅಳತೆಯ

ದೂರದವರೆಗೆ ಮಾತ್ರ ಆ ಬೀದಿಗೆ ದೋಷವಿರುತ್ತದೆ. ಎನ್ನುವ ಪಕ್ಷವೂ ಇದೆ. ಇದು ಮೃತಾ ಶೌಚಕ್ಕೆ ಮಾತ್ರ ಹೇಳಿದ್ದಾಗಿದೆ ಜಾತಾಶೌಚದಲ್ಲಿ ಸಪಿಂಡರ ಹೊರತಾಗಿ ಬೀದಿ, ಗ್ರಾಮ ಮೊದಲಾದ ಆಶೌಚವಿರುವುದಿಲ್ಲ.

## ವಿಶೇಷ ವಿಷಯ

ಹಿಂದೆ ಬಂದ ಆಶೌಚವು ತಿಳಿಯದೆ ಆಮೇಲೆ ಬಂದ ಆಶೌಚವನ್ನು ಪಾಲಿಸುತ್ತಿರುವಾಗ ಹಿಂದೆ ಬಂದ ಆಶೌಚವು ತಿಳುವಳಿಕೆಗೆ ಬಂದರೆ ಆ ಆಶೌಚ ಶೇಷ ದಿನಗಳಿಂದಲೇ ಶುದ್ಧಿ. ಆಮೇಲೆ ಬಂದ ಆಶೌಚ (ಮೊದಲು ತಿಳಿದಿದ್ದರೂ) ಅದನ್ನು ಪೂರ್ತಿಯಾಗಿ ಪಾಲಿಸಬೇಕಾಗಿಲ್ಲ. ಈ ವಿಚಾರದಲ್ಲಿ ತಿಳಿಯುವುದು ಮುಖ್ಯವಲ್ಲವೆನ್ನುವುದು ತಾತ್ಪರ್ಯ.

ಆದರೆ ಸಾಮಾನ್ಯ ನ್ಯಾಯದಂತೆ ಕೇಳಿದರೆ ಮಾತ್ರ ಆಶೌಚ ಪಾಲನೆ ಎಂದಿರುವುದರಿಂದ ಆ ನಂತರ ಬಂದ ಆಶೌಚವು ಮೊದಲು ತಿಳಿವಳಿಕೆಗೆ ಬಂದಿರುವುದರಿಂದ ಆಮೇಲೆ ತಿಳಿದ, ಹಿಂದೆ ಬಂದ ಆಶೌಚ ಶೇಷದಿಂದ ಶುದ್ಧಿಯಾಗುವುದಿಲ್ಲ. ಮೊದಲು ಬಂದಿದ್ದರೂ ಆಮೇಲೆ ತಿಳಿದಿರುವುದರಿಂದ ಆದರ ಶೇಷದಿಂದ ಶುದ್ಧಿಯಾಗುವುದಿಲ್ಲ ಎನ್ನುವ ಮತವೂ ಇದೆ.

## ಸಂಪಾತಾಶೌಚ (ಸನ್ನಿ ಪಾತಾ ಶೌಚ)

ಒಂದು ಆಶೌಚದ ಮಧ್ಯದಲ್ಲಿ ಮತ್ತೊಂದು ಆಶೌಚ ಬಂದರೆ, ಇದನ್ನು ಸಂಪಾತಾಶೌಚವೆನ್ನುತ್ತಾರೆ. ಹೆಚ್ಚು ದಿನಗಳ ಆಶೌಚ ಮಧ್ಯದಲ್ಲಿ ಅಷ್ಟೇ ದಿನದ ಅಥವಾ ಕಡಿಮೆ ದಿನಗಳ ಆಶೌಚ ಬಂದರೆ ಹಿಂದಿನ ಆಶೌಚದಿಂದಲೇ ಎರಡನೇ ಆಶೌಚವು ಮುಗಿಯುತ್ತದೆ. ಕಡಿಮೆ ದಿನಗಳ ಆಶೌಚದಲ್ಲಿ ಹೆಚ್ಚು ದಿನಗಳ ಆಶೌಚ ಹೋಗುವುದಿಲ್ಲ. ಜನನಾಶೌಚದಲ್ಲಿ ಮೃತಾಶೌಚ ಕಳೆಯುವುದಿಲ್ಲ. ಹಾಗೂ ಮೂರು ದಿನಗಳ ಆಶೌಚದಲ್ಲಿ ಹೆಚ್ಚು ದಿನಗಳ ಆಶೌಚ ಕಳೆಯುವುದಿಲ್ಲ. ಹತ್ತು ದಿನಗಳ ಜಾತಾಶೌಚ ಮಧ್ಯದಲ್ಲಿ ಅಷ್ಟೇ ದಿನಗಳ ಅಥವಾ ಮೂರು ದಿನಗಳ ಜಾತಾಶೌಚ ಬಂದರೆ ಹಿಂದಿನ ಆಶೌಚದಿಂದಲೇ ಕಳೆದುಹೋಗುತ್ತದೆ. ಆದರೆ ಹತ್ತು ದಿನಗಳ ಜನನಾಶೌಚದ ಮಧ್ಯೆ 9-10ನೇ ದಿನ ಮೂರು ದಿನಗಳ ಮೃತಾಶೌಚ ಬಂದರೆ



ಪೂರ್ವಾಶೌಚದಿಂದ ಶುದ್ಧಿಯಾಗುವುದಿಲ್ಲ. ಮೃತಾ ಶೌಚವನ್ನು ಪೂರ್ತಿ ಮೂರು ದಿನ ಆಚರಿಸಬೇಕು. ಹತ್ತು ದಿನಗಳ ಜಾತಾಶೌಚ ಮಧ್ಯದಲ್ಲಿ ಬಂದ ಹತ್ತು ದಿನಗಳ ಮೃತಾಶೌಚವೂ ಕಳೆದು ಹೋಗುವುದಿಲ್ಲ. ಮೃತಾಶೌಚವನ್ನು ಪೂರ್ತಿಯಾಗಿ ಆಚರಿಸಬೇಕು.

ದಶಾಹಜಾತಾಶೌಚದ ಒಂಭತ್ತನೇ ದಿನ ತ್ರಿದಿನ ಮೃತಾಶೌಚ ಬಂದರೆ ಅಧಿಕ ಜಾತಾಶೌಚ ಪ್ರಬಲವೆಂದೂ, ಅಲ್ಪಕಾಲದ ಶಾವಾಶೌಚ ಪ್ರಬಲವೆಂದೂ ಹೇಳುವ ಎರಡು ಪಕ್ಷಗಳೂ ಇವೆ. ಆಚಾರವೇ ನಿರ್ಣಾಯಕ. ಜ್ಞಾತಿಗಳ ಜನನಾ ಶೌಚಮಧ್ಯದಲ್ಲಿ ಪತ್ನೀ ಪ್ರಸವಿಸಿದರೆ ಆಗ ತನ್ನ ಆಶೌಚವನ್ನೇ ಪಾಲಿಸಬೇಕು. ಹಿಂದಿನ ಆಶೌಚದಿಂದ ಶುದ್ಧಿಯಾಗುವುದಿಲ್ಲ.

## ಸಂಪಾತಾಶೌಚಾಪವಾದ

ಮೃತಾಶೌಚ ಮಧ್ಯೆ ಸಮಾನ, ನ್ಯೂನ ಮೃತಾ ಶೌಚವೂ ಜನನಾಶೌಚ ಮಧ್ಯದಲ್ಲಿ ತತ್ಸಮಾನ, ನ್ಯೂನ, ಜನನಾಶೌಚವೂ ಬಂದಲ್ಲಿ ಮೇಲೆ ಹೇಳಿದ ನ್ಯಾಯ. ಹಾಗೂ ಜನನದಲ್ಲಿ ಮೃತಾಶೌಚವೂ, ಅಲ್ಪದಿನಾಶೌಚದಲ್ಲಿ ಅಧಿಕ ದಿನಾ ಶೌಚವೂ ಹೋಗುವುದಿಲ್ಲ. ಎನ್ನುವುದು ಸಾಮಾನ್ಯ ನ್ಯಾಯ. ಅವರಿಗೆ ಇತರ ಆಶೌಚಕ್ಕಿಂತ ತಮ್ಮ ತಮ್ಮ ಆಶೌಚವೇ ಪ್ರಬಲ. ರಜಸ್ವಲಾ, ಸೂತಿಕಾ(ಹಡೆದವಳು) ಅವಳಪತಿ, ದಹನ ಸಂಸ್ಕಾರ ಮಾಡುವ ಮತ್ತು ತಂದೆ-ತಾಯಿ-ಹೆಂಡತಿ-ಗಂಡ-ಇವರ ಮೃತಿಯಲ್ಲಿ, ಮಗ, ಗಂಡ, ಹೆಂಡತಿ ಇವರಿಗೆ ಮುಂಚೆ ಬಂದ ಆಶೌಚದಿಂದ ನಿವೃತ್ತಿ ಇಲ್ಲ. ತನ್ನ ಆಶೌಚವನ್ನು ಪೂರ್ತಿಯಾಗಿ ಮಾಡಬೇಕು. ಸಪಿಂಡ ಮೃತಾ ಶೌಚಮಧ್ಯದಲ್ಲಿ, ತಾಯಿಯ ಮೃತಾಶೌಚಮಧ್ಯದಲ್ಲಿ ತಂದೆ ಮೃತರಾದರೆ ತಂದೆಯ ಆಶೌಚವನ್ನೇ ಪಾಲಿಸಬೇಕು. ತಂದೆಯ ಮೃತಾಶೌಚ ಮಧ್ಯದಲ್ಲಿ ತಾಯಿ ಮೃತಳಾದರೆ ಒಂದು ಪಕ್ಷಿಣೀ ಆಶೌಚ ಹೆಚ್ಚಿಗೆ ಮಾಡಬೇಕು,

ಸಪಿಂಡ ಜಾತಾಶೌಚಮೃತಾಶೌಚ ಮಧ್ಯದಲ್ಲಿ ಪುತ್ರ ಪುತ್ರೀ ಜನನವಾದರೆ ತನ್ನ ಜಾತಾಶೌಚವನ್ನೇ ಪೂರ್ತಿಯಾಗಿ ಪಾಲಿಸಬೇಕು.

ಹಾಗೆಯೇ ಸಪಿಂಡಮೃತಾಶೌಚ ಮಧ್ಯದಲ್ಲಿ ಗಂಡನಾಗಲೀ ಹೆಂಡತಿಯಾಗಲೀ ಮೃತಳಾದರೆ ಗಂಡಹೆಂಡರು ತಮ್ಮ ದಶಾಹಾಶೌಚವನ್ನೇ ಪಾಲಿಸಬೇಕು.

ತಾಯಿ ತಂದೆಯ ಮೃತಿಯಲ್ಲಿ ಪುತ್ರ ಜನನ, ಮರಣವಾದರೆ ಮಾತಾಪಿತೃಮೃತಾಶೌಚ ಶೇಷದಿಂದಲೇ ಶುದ್ಧಿ. ಆದರೆ ಜನನನಿಗೆ (ಹಡೆದವಳಿಗೆ) ದಶಾಹಾಶೌಚ. ತನ್ನ ಆಶೌಚ ಪ್ರಬಲವಾದ್ದರಿಂದ ಪುತ್ರ ಪುತ್ರೀ ಜನನ ನಿಮಿತ್ತ ಆಶೌಚವನ್ನೇ ಪಾಲಿಸಬೇಕೆಂದು ಕೆಲವರ ಮತವಿದೆ. ಶಿಷ್ಟಾಚಾರವೇ ನಿರ್ಣಾಯಕ.

ಸಪಿಂಡಮೃತಾಶೌಚ ಮಧ್ಯದಲ್ಲಿ ಪುತ್ರೀಮೃತಳಾದರೆ ಸಪಿಂಡ ಮೃತಾಶೌಚ ಶೇಷದಿಂದಲೇ ಶುದ್ಧಿ. ಅತ್ತೆ ಮಾವಂದಿರ ಮೃತಿಯಲ್ಲಿ ಹಡೆದ ಸೊಸೆಗೆ ತನ್ನ ದಶಾಹಾಚಾಶೌಚವೇ ಮುಖ್ಯ. ಪೂರ್ವಾಶೌಚಮಧ್ಯದಲ್ಲಿ ದಹನಕರ್ತೃತ್ವ ಬಂದರೆ ಪೂರ್ವಾಶೌಚಶೇಷದಿಂದ ಶುದ್ಧಿ ಇಲ್ಲ.

## ಆಶೌಚದ ಗುರುಲಘುಭಾವ

ಜನಕ್ಕಿಂತ ಎರಡರಷ್ಟು ಶಾವಾಶೌಚ, ಅದಕ್ಕಿಂತ ಎರಡುಪಟ್ಟು ರಜೋದೋಷ, ಅದಕ್ಕಿಂತ ಎರಡುಪಟ್ಟು ಪ್ರಸವಾಶೌಚ, ಅದಕ್ಕಿಂತ ಎರಡು ಪಟ್ಟು ಶವದಹನ ನಿಮಿತ್ತಾಶೌಚ ಪ್ರಬಲವಾದ್ದರಿಂದ ಇವುಗಳಿಗೆ ಪೂರ್ವ ಪೂರ್ವಾಶೌಚದಿಂದ ಶುದ್ಧಿ ಇಲ್ಲ. ಎನ್ನುವುದು ಸಾಮಾನ್ಯ ನ್ಯಾಯ. ಸೋದರನು ದೇಶಾಂತರದಲ್ಲಿ ಮೃತನಾಗಿ ಆರು ತಿಂಗಳೊಳಗೆ ತಿಳಿದರೆ ದಶಾಹಾಶೌಚ, ಕ್ರಿಯಾಕರ್ತೃತ್ವ. ವರ್ಷದೊಳಗಾದರೆ ತ್ರಿರಾತ್ರ. ಕ್ರಿಯಾ ಕರ್ತೃವೇ ದಾಹಕನಾದರೆ ದಶರಾತ್ರ. ಸಂಸ್ಕಾರವಾಗಿದ್ದರೆ ಆರು ತಿಂಗಳೊಳಗೆ ಶ್ರವಣವಾದರೆ ತ್ರಿರಾತ್ರ. ವರ್ಷದವರೆಗೆ ಪಕ್ಷಿಣೀ ಅನಂತರ ಒಂದು ದಿನ. ಇದು ಜ್ಯೇಷ್ಠ ಕನಿಷ್ಠ ಸೋದರರಿಗೂ ಸಮಾನ.

ಅನಾಹಿತಾಗ್ನಿಮೃತಿಯಲ್ಲಿ_ಮರಣದಿಂದಲೆ ದಶಾಹಾದ್ಯಾಶೌಚ. ದಶಾಹಮಧ್ಯದಲ್ಲಿ ಸಂಸ್ಕಾರವಾದರೂ ಮೃತ ದಿನದಿಂದಲೇ ದಶಾಹಾದ್ಯಾಶೌಚ.



ಶ್ರೌತಾಗ್ನಿಯುಳ್ಳವನ ಮೃತಿಯಲ್ಲಿ ದಹನ ದಿನದಿಂದ ದಶಾಹಾಶೌಚಾನುಷ್ಠಾನ. ತ್ರೈ ಪಕ್ಷಿಕ ಮಾಸಿಕಕ್ಕಿಂತ ಪೂರ್ವದ ಮಾಸಿಕಗಳನ್ನು ಸಂಸ್ಕಾರ ತಿಥಿಯಲ್ಲೂ, ಮುಂದಿನ ಮಾಸಿಕ, ತ್ರೈಪಕ್ಷಿಕಾದಿಗಳನ್ನು ಮೃತತಿಥಿಯಲ್ಲೂ ಮಾಡಬೇಕು. ಆಹಿತಾಗ್ನಿಗೆ ದಹನಾದಿ ದಶಾಹ ಪಕ್ಷವು ಮೃತ ದಶಾಹ ಕಳೆದ ನಂತರ ದಹನ ಮಾಡಿದಲ್ಲಿ ಮಾತ್ರ. ಆಹಿತಾಗ್ನಿ ಅನಾಹಿತಾಗ್ನಿಗಳ ಮೃತಿಯಲ್ಲಿ ಮಂತ್ರ ಪೂರ್ವಕ ದಾಹವಾಗದೇ ಇದ್ದಲ್ಲಿ ದಶಾಹಮಧ್ಯದಲ್ಲಿ ಪುನಃ ದಹನ ಮಾಡಿದರೆ ಮರಣಾದಿ ಉಳಿದ ದಿನಗಳಷ್ಟೇ ಆಶೌಚ_ದಾಹಾದ್ಯಾಶೌಚವಲ್ಲ. ಆಹಿತಾಗ್ನಿಮೃತಿಯಲ್ಲಿ ಸಂಸ್ಕಾರ ದಿನದಿಂದ ಆಶೌಚ ವಿಧಿಸಿರುವುದರಿಂದ ದಾಹದವರೆಗೂ ಪುತ್ರಾದಿಗಳು ಸಪಿಂಡರು ಸಂಧ್ಯಾದಿ ಆವಶ್ಯಕ ನಿತ್ಯ ಕರ್ಮವನ್ನು ಮಾಡಬಹುದು.

ಮುಖ್ಯ ಕರ್ತೃ ಇರುವಾಗ ಮೃತನಿಗೆ ಸಂಸ್ಕಾರವಾಗಲೀ ಆಗದಿರಲಿ ಸಪಿಂಡರಿಗೆ ಮೃತಾಹಾದಿ ದಶಾಹಾಶೌಚ ಮಾತ್ರ, ಪುನಃ ಸಂಸ್ಕಾರ ಮಾಡಿದಾಗ ಆಶೌಚಾನುಷ್ಠಾನವಿಲ್ಲ.

## ದತ್ತಕಾಶೌಚ

ಕೇವಲ ದತ್ತಕ, ದ್ವ್ಯಾಮುಷ್ಯಾಯಣ ಎಂತ ಎರಡು ರೀತಿಯ ದತ್ತಪುತ್ರರು. ಸಕಾಲದಲ್ಲಿ ದತ್ತು ತೆಗೆದುಕೊಂಡು ಉಪನಯನ ಮಾಡಿದರೆ ಅವನು ಕೇವಲ ದತ್ತಕ. ಉಪನಯನ ವಾದವನನ್ನು ಸ್ವೀಕಾರ ಮಾಡಿದರೆ, ಅಥವಾ ನಮಗಿಬ್ಬರಿಗೂ ಈತ ಮಗನೆಂದು ಒಪ್ಪಂದವಾಗಿ ತೆಗೆದುಕೊಂಡರೆ, ಅವನು ದ್ವ್ಯಾಮುಷ್ಯಾಯಣ. ಈ ವಿಚಾರದಲ್ಲಿ ಶಾಸ್ತ್ರಗಳಲ್ಲಿ ಹಲವು ಪಕ್ಷಗಳು ಕಾಣುತ್ತವೆ. ಕೇವಲ ದತ್ತಕನಿಗೆ ಸ್ವೀಕಾರ ಮಾಡಿದ ತಂದೆಯ ಗೋತ್ರ ಹಾಗೂ ಎಲ್ಲ ಸಂಬಂಧ ಆಶೌಚವೂ ಔರಸ ಪುತ್ರನಿಗೆ ಹೇಗೋ ಹಾಗೇ ಪ್ರಾಪ್ತವಾಗುತ್ತದೆ. ಜನಕಮಾತಾಪಿತೃ ಮತ್ತು ಸೋದರರ ಮರಣದಲ್ಲಿ ತ್ರಿದಿನಾಶೌಚ. ಆದರೆ ಜನಕ ಮಾತಾಪಿತೃಗಳಿಗೆ ಸೋದರನಿಗೆ ಉತ್ತರ ಕ್ರಿಯೆ ಮಾಡಿದಲ್ಲಿ ದಶಾಹಾಶೌಚವಿರುತ್ತದೆ. ಉಪನಯನ ಆದವನನ್ನು; ಇರುವ ಒಬ್ಬನೇ ಪುತ್ರನನ್ನು ದತ್ತು ಕೊಟ್ಟಲ್ಲಿ ; ದತ್ತು ಹೋಮಾದಿ ಸಂಸ್ಕಾರ

ವಾಗದಿದ್ದಲ್ಲಿ, ಇಬ್ಬರಿಗೂ ಈತ ಪುತ್ರನೆಂದು ಒಪ್ಪಂದವಾಗಿದ್ದಲ್ಲಿ; ಐದು ವರ್ಷದ ನಂತರ ಪ್ರೀತಿಯಿಂದ ಸಾಕಿ ಕೊಂಡಿದ್ದಲ್ಲಿ ಇವರೆಲ್ಲ ದ್ವ್ಯಾಮುಷ್ಯಾಯಣರು. ಇವರು ಎರಡೂ ಗೋತ್ರಗಳ ಸಂಬಂಧಿ ಸಪಿಂಡಾದಿ ಜನನ ಮರಣಾದ್ಯಾಶೌಚಗಳನ್ನೆಲ್ಲಾ ಪಾಲಿಸಬೇಕು. ಇದನ್ನು ಮುಂದೆ ಹೇಳಲಾಗುತ್ತದೆ.

ಕೇವಲ ದತ್ತಕನೂ ಕೂಡ ಜನಕನಿಗೆ ಸಂಸ್ಕಾರ ಮಾಡಿದಲ್ಲಿ ಮಾತಾಮಹಾದ್ಯಾಶೌಚ ಶ್ರಾದ್ಧ ಎಲ್ಲವನ್ನು ಅನುಷ್ಠಾನ ಮಾಡಬೇಕು. ದತ್ತಕನಿಗೆ ಪ್ರತಿ ಗ್ರಹೀತೃಕುಲದಲ್ಲಿ ತ್ರಿಪುರುಷ ಸಾಪಿಂಡ್ಯವಿರುವುದರಿಂದ ಆಶೌಚವೂ ತ್ರಿಪುರುಷದವರೆಗೆ ಮಾತ್ರ ಎನ್ನುವ ಪಕ್ಷವೂ ಇದೆ.

## ಅಸಗೋತ್ರತ್ರಿರಾತ್ರಾಶೌಚ

ವಿವಾಹಿತ ಪುತ್ರೀ ಮರಣದಲ್ಲಿ ಮಾತಾಪಿತೃಗಳಿಗೂ, ಮಾತಾಪಿತೃ ಮರಣದಲ್ಲಿ ವಿವಾಹಿತ ಪುತ್ರಿಗೂ ಪರಸ್ಪರ ತ್ರಿರಾತ್ರಾಶೌಚ. ವಿವಾಹಿತ ಪುತ್ರಿಗೆ ಕ್ರಿಯಾ ಕರ್ತೃತ್ವ ಬಂದಲ್ಲಿ ದಶಾಹಾಶೌಚ. ಉಪನೀತದೌಹಿತ್ರ ಉಪನೀತ ಭಗಿನೀ ಪುತ್ರರ ಮೃತಿಯಲ್ಲಿ ಮಾತಾಮಹ ಮಾತಾ ಮಹೀ ಮಾತೃಷ್ವಸೃ ಮಾತುಲನಿಗೂ, ಮಾತಾಮಹ ಮಾತಾಮಹೀ ಮಾತೃಷ್ವಸೃ ಮಾತುಲ ಮೃತಿಯಲ್ಲಿ ಉಪನೀತ ದೌಹಿತ್ರ ಉಪನೀತ ಭಗಿನೀ ಪುತ್ರ ನಿಗೂ ತ್ರಿರಾತ್ರಾ ಶೌಚ. ಮಾತುಲಾನೀ(ಮಾತುಲ ಪತ್ನಿ)ಮೃತಿಯಲ್ಲೂ ತ್ರಿರಾತ್ರಾಶೌಚ. ಚೂಡಾಕರ್ಮದ ನಂತರ ಅಥವಾ ಮೂರು ವರ್ಷದನಂತರ ಉಪನಯನ ಅಥವಾ ಗರ್ಭಾಷ್ಟಮಕ್ಕೆ ಮುಂಚೆ ದೌಹಿತ್ರ ಭಾಗಿನೇಯ ಮೃತಿಯಲ್ಲಿ ಪಕ್ಷಿಣೀ. ಚೂಡಾಕರ್ಮ ಅಥವಾ ಮೂರು ವರ್ಷಕ್ಕಿಂತಮೊದಲು ದೌಹಿತ್ರ ಭಾಗಿನೇಯ ಮೃತಿಯಲ್ಲಿ ಸದ್ಯಃಸ್ನಾನ. ಗರ್ಭಾಷ್ಟಮದ ನಂತರ ಉಪನಯನವಾಗದಿದ್ದರೂ ತ್ರಿದಿನಾಶೌಚವಿದೆ. ಅನುಪನೀತ ಮಾತುಲ. ಮದುವೆ ಆಗದ ಮಾತೃಷ್ವಸೃ ಮೃತಿಯಲ್ಲಿ ಸದ್ಯಃ ಶೌಚ. ವಿವಾಹಿತ ಭಗಿನೀಮೃತಿಯಲ್ಲಿ ಸೋದರನಿಗೆ ತ್ರಿರಾತ್ರಾಶೌಚ. ಉಪನೀತ ಸೋದರ ಮರಣದಲ್ಲಿ ಭಗಿನಿಗೆ ತ್ರಿರಾತ್ರ. ಹಾಗೆಯೇ ಪಿತೃಭಗಿನೀ ಮರಣದಲ್ಲಿ



ಸೋದರಳಿಯನಿಗೆ ತ್ರಿರಾತ್ರ. ಸೋದರಳಿಯನ ಮರಣದಲ್ಲಿ ಪಿತೃಭಗಿನಿಗೆ ತ್ರಿರಾತ್ರ. ಪರೋಕ್ಷದಲ್ಲಾದರೆ ಪಕ್ಷಿಣೀ ಅನ್ನುವ ಮತವೂ ಇದೆ.

ಶಾವಾಶೌಚ ಮಧ್ಯದಲ್ಲಿ ರಜಸ್ವಲೆಯಾದರೆ ರಜೋನಿಮಿತ್ತ ಆಶೌಚವನ್ನೇ ಪಾಲಿಸಬೇಕು. ರಜೋನಿಮಿತ್ತ ತ್ರಿದಿನಾಶೌಚ ಮಧ್ಯದಲ್ಲಿ ಒಂದು ದಿನದ ಮೂರು ದಿನದ ಜಾತಾಶೌಚ, ಮೃತಾಶೌಚ ಬಂದರೆ ಅದು ನಿವೃತ್ತಿ ಹೊಂದುತ್ತದೆ. ದಶಾಹಾಶೌಚ ಬಂದರೆ ಆಗ ಅದನ್ನೇ ಪಾಲಿಸಬೇಕು ; ಅಧಿಕ ಕಾಲಾಶೌಚವಾದುದರಿಂದ. ಜನನಾಶೌಚಕ್ಕಿಂತ ಮೃತಾಶೌಚ ಪ್ರಬಲ. ಅದಕ್ಕಿಂತ ರಜೋನಿಮಿತ್ತಾಶೌಚ ಪ್ರಬಲ. ಅದಕ್ಕಿಂತ ಸೂತಿಕಾಶೌಚ ಪ್ರಬಲ. ಅದಕ್ಕಿಂತ ಶವದಹನಾಶೌಚ ಪ್ರಬಲ. ಇವುಗಳಲ್ಲಿ ಮುಂದುಮುಂದಿನ ಆಶೌಚಕ್ಕೆ ಪೂರ್ವಾಶೌಚದಿಂದ ನಿವೃತ್ತಿ ಇಲ್ಲ ಎನ್ನುವುದು ಸಾಮಾನ್ಯ ನ್ಯಾಯ. ಇದನ್ನು ಸರಿಯಾಗಿ ತಿಳಿದುಕೊಂಡರೆ ಆಶೌಚದ ಅರ್ಧಭಾಗ ತಿಳಿದಂತೆ.

ಶ್ವಶ್ರೂಶ್ವಶುರ ಮೃತಿಯಲ್ಲಿ ಜಾಮಾತೃವಿಗೆ ತ್ರಿದಿನ. ಪತ್ನೀ ಮರಣದ ನಂತರ ಶ್ವಶ್ರೂಶ್ವಶುರ ಮೃತಿಯಲ್ಲಿ ಒಂದು ದಿನ. ಅವಳಿಗೆ ಸಂತತಿಯಾಗಿದ್ದರೆ ಮೂರು ದಿನ. ತನ್ನ ಮನೆಯಲ್ಲಿ ಶ್ರೋತ್ರಿಯ ಮೃತಿಯಲ್ಲಿ ತ್ರಿದಿನ. ಅಶ್ರೋತ್ರಿಯನಾದರೆ ಒಂದು ದಿನ. ಸ್ವಂತ ಮನೆಯಲ್ಲದೆ ಬೇರೆ ಕಡೆ ವಾಸ ಮಾಡಿದಾಗ ಅಲ್ಲಿ ಶ್ರೋತ್ರಿಯ ಮೃತನಾದರೆ ಅನ್ವಕ್ಷ. ಅಂದರೆ ಶವ ಮನೆಯಲ್ಲಿರುವವರೆಗೆ ಮಾತ್ರ ಆಶೌಚ. ತಂದೆಯ ಮನೆಯಲ್ಲಿ ಮಗಳು ಹಡೆದರೆ ತಂದೆ ತಾಯಿ ಸೋದರರಿಗೆ ಮೂರು ದಿನ. ದೊಡ್ಡಪ್ಪ ಚಿಕ್ಕಪ್ಪ ಸೋದರಮಾವನ ಮನೆಯಲ್ಲಿ ಪ್ರಸವವಾದರೆ ಅವರಿಗೆ ಒಂದು ದಿನ. ಬೇರೆಯವರ ಮನೆಯಲ್ಲಿ ಪ್ರಸವವಾದರೆ ಅವರಿಗೆ ಆಶೌಚವಿಲ್ಲ. ಈ ಆಶೌಚದ ಮಧ್ಯದಲ್ಲಿ ಬೇರೆ ಆಶೌಚ ಬಂದರೆ ಅದನ್ನೇ ಪಾಲಿಸಬೇಕು. ಪುತ್ರಿ ಪ್ರಸವದಲ್ಲಿ ಏಕದಿನ. ಮರಣದಲ್ಲಿ ತ್ರಿದಿನಾ ಶೌಚವೆನ್ನುವ ಪಕ್ಷವೂ ಇದೆ. ತಂದೆತಾಯಿಯರಿಗೆ ಮೂರು ದಿನ ಸೋದರರಿಗೆ ಒಂದು ದಿನವೆನ್ನುವ ಪಕ್ಷವೂ ಇದೆ.

## ಸ್ತ್ರೀ ವಿಷಯದಲ್ಲಿ ಪಕ್ಷಿಣ್ಯಾಶೌಚ

ಅಸಗೋತ್ರ ಸ್ತ್ರೀ ಮರಣದಲ್ಲಿ -ಗಂಗೆಯ ಮೃತಿಯಲ್ಲಿ ಈ ಕೆಳಗೆ ಕಾಣಿಸಿರುವ ಮೂವತ್ತೆಂಟು ಜನರಿಗೆ ಪಕ್ಷಿಣ್ಯಾ ಶೌಚ. 1) ತಾಯಿಯ ತಂದೆ 2) ತಾಯಿಯ ತಾಯಿ 3)ಸೋದರಮಾವ 4)ಅವನ ಹೆಂಡತಿ 5) ಅವನ ಮಗ 6) ಅವನ ಮಗಳು 7)ತಾಯಿಯ ಅಕ್ಕತಂಗಿಯರು 8) ಅವರ ಮಗ 9)ಅವರ ಮಗಳು 10) ತಂದೆಯ ಸೋದರಿಯರು 11) ಅವರ ಮಗ 12) ಅವರ ಮಗಳು 13) ತಂದೆಯ ಸೋದರರು 14) ಅವರ ಮಗ 15) ಅವರ ಮಗಳು 16) ತನ್ನ ಅಕ್ಕತಂಗಿಯರು 17) ಅವರ ಮಗ 18) ಅವರ ಮಗಳು 19) ತನ್ನ ಅಣ್ಣ ತಮ್ಮಂದಿರು 20) ಅವರ ಮಗ 21) ಅವರ ಮಗಳು 22) ತನ್ನ ಮಗನ ಮಗಳು 23) ತನ್ನ ಮಗಳ ಮಗಳು 24) ತಂದೆಯ ತಂದೆ 25) ತಂದೆಯ ತಾಯಿ 26) ಸೋದರಮಾವನ ಮಗನ ಹೆಂಡತಿ 27) ಸೋದರತ್ತೆಯ ಮಗನ ಹೆಂಡತಿ 28) ತಾಯಿಯ ಅಕ್ಕತಂಗಿಯರ ಮಗನ ಹೆಂಡತಿ 29) ತಂದೆಯ ಅಣ್ಣತಮ್ಮಂದಿರ ಮಗನ ಹೆಂಡತಿ 30) ಅಕ್ಕತಂಗಿಯರ ಮಗನ ಹೆಂಡತಿ 31) ಅಣ್ಣತಮ್ಮಂದಿರ ಮಗನ ಹೆಂಡತಿ 32) ಮಗಳ ಮಗನ ಹೆಂಡತಿ 33) ಅಣ್ಣತಮ್ಮಂದಿರ ಹೆಂಡತಿ 34) ತಂದೆಯ ಅಣ್ಣತಮ್ಮಂದಿರ ಹೆಂಡತಿ 35) ಪರೋಕ್ಷದಲ್ಲಿ ತಾಯಿ 36) ಪರೋಕ್ಷದಲ್ಲಿ ತಂದೆ 37)ಪರೋಕ್ಷದಲ್ಲಿ ಮಗಳು 38) ಪರೋಕ್ಷದಲ್ಲಿ ಮಗಳ ಮಗ, ಈ ಮೂವತ್ತೆಂಟು ಜನರಿಗೆ ಪಕ್ಷಿಣ್ಯಾಶೌಚ. ಪಕ್ಷಿಣೀ ಎಂದರೆ ಒಂದೂವರೆ ದಿನ. ಅಂದ್ರೆ ಹಗಲು ಮರಣವಾದರೆ ಆ ಹಗಲು ರಾತ್ರಿ ಮತ್ತು ಮರುದಿನ ಹಗಲು , ಹೀಗೆ ಒಂದೂವರೆ ದಿವಸ. ರಾತ್ರಿಯಲ್ಲಿ ಮೃತಿಯಾದರೆ ಆರಾತ್ರಿ ಮುಂದಿನ ಹಗಲು ರಾತ್ರಿ ಹೀಗೆ ಒಂದೂವರೆ ದಿವಸ ಆಶೌಚ. 1) ಸೋದರತ್ತೆಯ ಮಗನ ಹೆಂಡತಿ 2) ಅಕ್ಕತಂಗಿಯರ ಮಗನ ಹೆಂಡತಿ 3) ಸೋದರಮಾವನ ಮಗನ ಹೆಂಡತಿ 4) ಅಣ್ಣತಮ್ಮಂದಿರ ಮಗನ ಹೆಂಡತಿ 5) ಚಿಕ್ಕಪ್ಪ ದೊಡ್ಡಪ್ಪ ಇವರ ಮಗನ ಹೆಂಡತಿ 6) ಮಗಳ ಮಗನ ಹೆಂಡತಿ, ಈ ಆರು ಜನರನ್ನು ಬಿಟ್ಟು ಉಳಿದ ಮೇಲ್ಕಂಡ ಮೂವತ್ತೆರಡು ಜನರ



ಮೃತಿಯಲ್ಲೂ ಗಂಗೆಗೆ ಪಕ್ಷಿಣ್ಯಾಶೌಚ. ಉಳಿದ ಈ ಆರು ಜನರ ಮೃತಿಯಲ್ಲಿ ಗಂಗೆಗೆ ಸ್ನಾನ ಮಾತ್ರ. ಪ್ರತ್ಯಕ್ಷದಲ್ಲಿ ತಂದೆ, ತಾಯಿ, ಅಣ್ಣತಮ್ಮಂದಿರು ಉಪನೀತ ದೌಹಿತ್ರ ವಿವಾಹಿತ ಪುತ್ರೀ ಇವರ ಮೃತಿಯಲ್ಲಿ ಗಂಗೆಗೆ ತ್ರಿರಾತ್ರಾಶೌಚ. ಇದು ಸರ್ವತ್ರ ಆಚರಣೆಯಲ್ಲಿದೆ.

## ಪುರುಷ ವಿಷಯದಲ್ಲಿ ಪಕ್ಷಿಣ್ಯಾಶೌಚ

ಯಜ್ಞದತ್ತನ ಮೃತಿಯಲ್ಲಿ ಈ ಕೆಳಕಂಡ ಇಪ್ಪತ್ತನಾಲ್ಕು ಜನರಿಗೆ ಪಕ್ಷಿಣ್ಯಾ ಶೌಚ 1) ತಾಯಿಯ ಅಕ್ಕತಂಗಿಯರು 2) ಇವರ ಮಗಳು 3) ಇವರ ಮಗ 4) ಇವರ ಮಗನ ಹೆಂಡತಿ 5) ತಂದೆಯ ಅಕ್ಕತಂಗಿಯರು 6) ಇವರ ಮಗಳು 7) ಅವರ ಮಗ 8) ಅವರ ಮಗನ ಹೆಂಡತಿ 9) ಮಗನ ಮಗಳು 10) ಪರೋಕ್ಷದಲ್ಲಿ ಅಕ್ಕತಂಗಿಯರು 11) ಅಕ್ಕತಂಗಿಯರ ಮಗಳು 12) ಅಣ್ಣತಂಗಿಯರ ಮಗಳು 13) ತಂದೆಯ ಅಣ್ಣತಮ್ಮಂದಿರ ಮಗಳು 14) ಮಗಳ ಮಗಳು 15) ಸೋದರ ಮಾವನ ಮಗಳು 16) ಸೋದರ ಮಾವನ ಮಗ 17) ಸೋದರ ಮಾವನ ಮಗನ ಹೆಂಡತಿ 18) ಪರೋಕ್ಷದಲ್ಲಿ ಮಗಳು 19) ಪರೋಕ್ಷದಲ್ಲಿ ಅಕ್ಕತಂಗಿಯರ ಮಗ 20) ಅಕ್ಕತಂಗಿಯರ ಮಗನ ಹೆಂಡತಿ 21) ಪರೋಕ್ಷದಲ್ಲಿ ಮಗಳ ಮಗ 22) ಇವನ ಹೆಂಡತಿ 23) ಪರೋಕ್ಷದಲ್ಲಿ ತಾಯಿಯ ತಂದೆ 24) ಪರೋಕ್ಷದಲ್ಲಿ ತಾಯಿಯ ತಾಯಿ, ಹೀಗೆ ಯಜ್ಞದತ್ತನ ಮೃತಿಯಲ್ಲಿ ಈ ಇಪ್ಪತ್ತನಾಲ್ಕು ಜನರಿಗೆ ಪಕ್ಷಿಣ್ಯಾ ಶೌಚ. ಈ ಇಪ್ಪತ್ತನಾಲ್ಕು ಜನರ ಮೃತಿಯಲ್ಲಿ ಯಜ್ಞದತ್ತನಿಗೆ ಪಕ್ಷಿಣ್ಯಾ ಶೌಚ ಆಗಬೇಕಾಗಿದ್ದರೂ ಈ ಕೆಳ ಕಂಡ ವ್ಯತ್ಯಾಸವನ್ನು ಅವಶ್ಯ ಗಮನಿಸಬೇಕು. 1) ತಾಯಿಯ ಅಕ್ಕತಂಗಿಯರ ಮಗನ ಹೆಂಡತಿ 2) ತಂದೆಯ ಅಕ್ಕತಂಗಿಯರ ಮಗನ ಹೆಂಡತಿ 3) ತನ್ನ ಅಕ್ಕತಂಗಿಯರ ಮಗನ ಹೆಂಡತಿ 4) ಮಗಳ ಮಗನ ಹೆಂಡತಿ 5) ಸೋದರ ಮಾವನ ಮಗನ ಹೆಂಡತಿ ಈ ಐದು ಜನರ ಮೃತಿಯಲ್ಲಿ ದೇವದತ್ತನಿಗೆ ಪಕ್ಷಿಣ್ಯಾ ಶೌಚವಿಲ್ಲ. ಸ್ನಾನ ಮಾತ್ರ. ಮತ್ತು ಮೇಲೆಕಾಣಿಸಿದ 1) ತಾಯಿಯ ಅಕ್ಕತಂಗಿಯರು 2) ಅಕ್ಕತಂಗಿಯರ ಮಗ 3) ತನ್ನ ಮಗಳು 4) ತಾಯಿಯ ತಂದೆ 5) ತಾಯಿಯ ತಾಯಿ 6)

ತಾಯಿಯ ಅಕ್ಕತಂಗಿಯರು 7) ತಂದೆಯ ಅಕ್ಕತಂಗಿಯರು 8) ಸೋದರ ಮಾವನ ಹೆಂಡತಿ ಈ ಎಂಟು ಜನರ ಸಾನ್ನಿಧ್ಯ ಮರಣದಲ್ಲಿ ಮೂರು ದಿನ. ಉಳಿದವರ ಮೃತಿಯಲ್ಲಿ ದೇವದತ್ತನಿಗೆ ಪಕ್ಷಿಣ್ಯಾ ಶೌಚ.

## ಗಮನಿಸಬೇಕಾದುದು

ಸ್ತ್ರೀಯರಿಗೆ ವಿವಾಹಾನಂತರ ಪುರುಷರಿಗೆ ಉಪನಯನಾನಂತರವೇ ತ್ರಿರಾತ್ರ ಪಕ್ಷಿಣ್ಯಾ ದ್ಯಾ ಶೌಚ ಹೇಳಿದಂತೆ ಅವರ ಪ್ರತಿಯೋಗಿಗಳಿಗೂ ವಿವಾಹ ಉಪನಯನಾನಂತರವೇ ತ್ರಿರಾತ್ರ ಪಕ್ಷಿಣ್ಯಾದ್ಯಾ ಶೌಚ. ಅದಕ್ಕೆ ಮೊದಲು ಸ್ನಾನ ಮಾತ್ರ. ಪುರುಷರಿಗೆ ಹೇಳಿದ ತ್ರಿರಾತ್ರ ಪಕ್ಷಿಣ್ಯಾದ್ಯಾಶೌಚವು ಅವರ ಪತ್ನಿಯರಿಗೂ ಇದೆ. ಆದರೆ ಪತ್ನೀಗೆ ಬಂದ ತ್ರಿರಾತ್ರ ಪಕ್ಷಿಣ್ಯಾದ್ಯಾ ಶೌಚವು ಪತಿಗೆ ಇಲ್ಲ. ಸ್ನಾನ ಮಾತ್ರ. ತಾಯಿಯ ಅಕ್ಕತಂಗಿಯರ, ತಂದೆಯ ಅಕ್ಕತಂಗಿಯರ ಗಂಡನ ಮೃತಿಯಲ್ಲಿ ದೌಹಿತ್ರ ಭಾಗಿನೇಯರ ಪತ್ನೀ ಮೃತಿಯಲ್ಲೂ ಸ್ನಾನ ಮಾತ್ರ. ಆದರೆ ಮಾತಾಮಹೀ, ಮಾತುಳ ಪತ್ನೀ, ಭಗಿನೀ ಮೃತಿಯಲ್ಲಿ ಸ್ತ್ರೀಗೆ ಪಕ್ಷಿಣೀ. ಪುರುಷರಿಗೆ ತ್ರಿರಾತ್ರ. ಈ ಅಪವಾದವನ್ನು ಅವಶ್ಯ ಗಮನಿಸಬೇಕು.

## ಪುರುಷ ವಿಷಯದಲ್ಲಿ ದಿನಾಶೌಚ

1) ಸಪತ್ನೀ ಮಾತೃವಿನ ತಂದೆ 2) ಸಪತ್ನೀ ಮಾತೃ ತಾಯಿ 3) ಸಪತ್ನೀ ಮಾತೃವಿನ ಸೋದರರು 4) ಇವರ ಹೆಂಡತಿ 5) ಇವರ ಮಗ 6) ಇವರ ಮಗಳು 7) ಸಪತ್ನೀ ಮಾತೃವಿನ ಸೋದರಿಯರು 8) ಇವರ ಮಗ 9) ಇವರ ಮಗಳು 10) ಸಪತ್ನೀ ಮಾತೃವಿನ ಹೊಟ್ಟೆಯಲ್ಲಿ ಹುಟ್ಟಿದ ಸೋದರಿಯರು 11) ಇವರ ಮಗ 12) ಇವರ ಮಗಳು 13) ತಂದೆಯ ಸವತೀ ತಾಯಿಯ ಮಗನ ಮಗಳು 14) ತನ್ನ ಸವತಿ ತಾಯಿಯ ಮಗನ ಮಗಳು 15-೧) ತಾಯಿಯ ಸವತಿಯ ಅಣ್ಣತಮ್ಮಂದಿರು (ಇವರೂ ಭಿನ್ನೋದರ ಮಾತುಳರು) 16) ಭಿನ್ನೋದರ ಮಾತುಳ ಪುತ್ರ 17) ಭಿನ್ನೋದರ



ಮಾತುಳ ಪುತ್ರೀ 18) ತಂದೆಯ ಸವತೀ ತಾಯಿಯ ಮಗಳು 19) ಅವರ ಮಗ 20) ಇವಳ ಮಗಳು, ಈ ಇಪ್ಪತ್ತು ಜನರ ಮೃತಿಯಲ್ಲಿ ಯಜ್ಞದತ್ತನಿಗೆ ಒಂದು ದಿನಾಶೌಚ. ಈ ಯಜ್ಞದತ್ತನ ಮೃತಿಯಲ್ಲೂ ಇಪ್ಪತ್ತನಾಲ್ಕು ಜನರಿಗೆ ಒಂದು ದಿನಾಶೌಚ.

ನಿಯತ ದತ್ತನಿಗೆ ಹಿಂದೆ ಆಶೌಚ ಹೇಳಿದೆ. ಅನಿಯತ ದತ್ತನಿಗೆ (ನ್ಯಾಯವಾಗಿ ದತ್ತು ಆಗದವನಿಗೆ) ಈ ಕೆಳಕಂಡ ಇಪ್ಪತ್ತೊಂದು ಜನರ ಮೃತಿಯಲ್ಲಿ ಒಂದು ದಿನ ಆಶೌಚ. 1) ದತ್ತು ತೆಗೆದುಕೊಂಡ ತಂದೆ 2) ದತ್ತು ತಾಯಿ 3) ಈ ದತ್ತಕನ ತಂದೆಯ ತಂದೆ 4) ದತ್ತು ತಂದೆಯ ತಾಯಿ 5) ದತ್ತು ತಂದೆಯ ಅಣ್ಣ ತಮ್ಮಂದಿರು 6) ಇವರ ಮಗ 7) ಇವರ ಮಗಳು 8) ದತ್ತು ತಂದೆಯ ಸೋದರಿಯರು 9) ಇವರ ಮಗ 10) ಇವರ ಮಗಳು 11) ದತ್ತು ತಂದೆಯ ಮಗಳು 12) ಇವಳ ಮಗ 13) ಇವಳ ಮಗಳು 14) ದತ್ತು ತಾಯಿಯ ತಂದೆ 15) ದತ್ತು ತಾಯಿಯ ತಾಯಿ 16) ದತ್ತು ತಾಯಿಯ ಸೋದರಿಯರು 17) ಇವರ ಮಗ 18) ಇವರ ಮಗಳು 19) ದತ್ತು ತಾಯಿಯ ಅಣ್ಣತಮ್ಮಂದಿರು 20) ಇವರ ಮಗ 21) ಇವರ ಮಗಳು, ಇವರ ಮೃತಿಯಲ್ಲಿ ಅನಿಯತ ದತ್ತಕನಿಗೂ ಅನಿಯತ ದತ್ತಕನ ಮೃತಿಯಲ್ಲಿ ಇವರಿಗೂ ಪರಸ್ಪರ ಒಂದು ದಿನಾಶೌಚ.

## ಅನಿಯತ ದತ್ತಕನಿಗೆ ಜನಕ ಕುಲದ ಆಶೌಚ

1) ಜನಕತಂದೆ 2) ಜನನೀ 3) ತಂದೆಯ ತಂದೆ 4) ತಂದೆಯ ತಾಯಿ ಇವರ ಮೃತಿಯಲ್ಲಿ ತ್ರಿದಿನ. 5) ತಂದೆಯ ಅಕ್ಕತಂಗಿಯರು 6) ಇವರ ಮಗ 7) ಇವರ ಮಗಳು 8) ತಂದೆಯ ಸೋದರರು 9) ಇವರ ಮಗ 10) ಇವರ ಮಗಳು 11) ಸೋದರರು 12) ಅವರ ಮಗ 13) ಅವರ ಮಗಳು 14) ತಾಯಿಯ ತಂದೆ 15) ತಾಯಿಯ ತಾಯಿ 16) ತಾಯಿಯ ಸೋದರರು 17) ಇವರ ಮಗ 18) ಇವರ ಮಗಳು 19) ತಾಯಿಯ ಅಕ್ಕ ತಂಗಿಯರು 20) ಇವರ ಮಗ 21) ಇವರ ಮಗಳು 22) ತನ್ನ ಸೋದರಿಯರು 23) ಅವರ ಮಗ 24) ಅವರ ಮಗಳು ಈ ಇಪ್ಪತ್ತನಾಲ್ಕು ಜನರ ಮೃತಿಯಲ್ಲಿ

ಅನಿಯತ ದತ್ತಕನಿಗೆ ಪಕ್ಷಿಣ್ಯಾಶೌಚವೂ ಅನಿಯತದತ್ತಕನ ಮೃತಿಯಲ್ಲಿ ಈ ಇಪ್ಪತ್ತು ನಾಲ್ಕು ಜನರಿಗೆ ಪಕ್ಷಿಣ್ಯಾಶೌಚವು. ನಿಯತ (ಶುದ್ಧ) ದತ್ತಕನಗೆ ಜನಕ ತಂದೆ ತಾಯಿ ಸೋದರ ಭಿನ್ನೋದರ. ಇವರ ಮೃತಿಯಲ್ಲಿ ತ್ರಿರಾತ್ರಾ ಶೌಚ ಔರಸಮತ್ರನಿಗೆ ಬರುವ ಎಲ್ಲ ಆಶೌಚವೂ ದತ್ತಕನಿಗೆ ಇದೆ. ದತ್ತು ಗೋತ್ರದಲ್ಲಿ ತ್ರಿಪುರುಷಾಶೌಚ.

## ಸ್ತ್ರೀ ವಿಷಯದಲ್ಲಿ ದಿನಾಶೌಚ

1)ಸವತೀ ತಾಯಿ 2) ಇವಳ ತಾಯಿ 3) ಇವಳ ತಂದೆ 4) ಸಪತ್ನೀ ಮಾತೃವಿನ ಸೋದರರು 5) ಅವರ ಹೆಂಡತಿ 6) ಅವರ ಮಗ 7) ಅವರ ಮಗಳು 8) ಸವತೀ ತಾಯಿಯ ಸೋದರಿಯರು 9) ಅವರ ಮಗ 10) ಅವರ ಮಗಳು 11) ಸವತೀ ತಾಯಿಯ ಮಗಳು 12) ಇವಳ ಮಗ 13) ಇವಳ ಮಗಳು 14) ತಂದೆಯ ಸವತೀ ತಾಯಿಯ ಮಗ 15) ಅವನ ಹೆಂಡತಿ 16) ಸವತೀ ತಾಯಿಯ ಮಗ 17) ಅವನ ಹೆಂಡತಿ 18) ಅವನ ಮಗ 19) ಅವನ ಮಗಳು 20) ತಂದೆಯ ಸವತೀ ತಾಯಿಯ ಮಗಳು 21) ಅವಳ ಮಗ 22) ಅವಳ ಮಗಳು , ಈ ಇಪ್ಪತ್ತೆರಡು ಜನರ ಮೃತಿಯಲ್ಲಿ ಗಂಗಾ ಎಂಬ ಸ್ತ್ರೀಗೆ ಒಂದು ದಿನ ಆಶೌಚ. ಗಂಗಾ ಮೃತಿಯಲ್ಲೂ ಈ ಇಪ್ಪತ್ತೆರಡು ಜನರಲ್ಲಿ ಸವತೀ ತಾಯಿಯನ್ನು ಬಿಟ್ಟು ಇಪ್ಪತ್ತೊಂದು ಜನರಿಗೆ ಒಂದು ದಿನ ಆಶೌಚ. ಸವತೀ ತಾಯಿಗೆ ಮಾತ್ರ ತಂದೆಗೆ ಬಂದ ತ್ರಿದಿನಾ ಶೌಚವಿದೆ. ಈ ಆಶೌಚ ಒಂದೊಂದು ಕಡೆ ಒಂದೊಂದು ರೀತಿಯಾಗಿದೆ. ಸ್ಯಾಲ (ಹೆಂಡತಿಯ ಸೋದರ) ನ ಮೃತಿಯಲ್ಲಿ ಪ್ರತ್ಯಕ್ಷದಲ್ಲಿ ಒಂದು ದಿನ, ಪರೋಕ್ಷದಲ್ಲಿ ಸ್ನಾನ, ಹೆಂಡತಿಯ ಸೋದರಿಯ ಮೃತಿಯಲ್ಲಿ ಆಶೌಚವಿಲ್ಲ.

ಸಬ್ರಹ್ಮಚಾರಿ (ಒಟ್ಟಿಗೆ ವೇದಾಧ್ಯಯನ ಮಾಡಿದವರು) ಮೃತಿಯಲ್ಲಿ ·ಮಂಡಲಾಧಿಪತಿ ರಾಜರ ಮೃತಿಯಲ್ಲಿ ಒಂದು ದಿನ, ಮಿತ್ರಜಾಮಾತಾ, ಹೆಂಡತಿಯ ಸೋದರ, ಅವರ ಮಕ್ಕಳು ಇವರ ಮೃತಿಯಲ್ಲಿ ಸನ್ನಿಧಾನದಲ್ಲಿ ಒಂದು ದಿನ. ದೇಶಾಂತರವಾದರೆ ಸ್ನಾನ ಮಾತ್ರ. ಸಾಮಾನ್ಯ ಬಂಧುಗಳ ಮೃತಿಯಲ್ಲಿ ವಿಶೇಷ ಹೇಳದಿದ್ದರೆ ಸನ್ನಿಧಾನಾದಿಗಳನ್ನಿಟ್ಟುಕೊಂಡು ಒಂದು



ದಿನ, ಅರ್ಧ ದಿನ, ಸ್ನಾನ ಮಾತ್ರ. ಜಾಮಾತೃ, ಭಗಿನೀ ಪತಿಮೃತಿಯಲ್ಲಿ ಸ್ನಾನ ಮಾತ್ರ. ಋತ್ವಿಕ್ ಆಚಾರ್ಯಪುತ್ರ ಇವರ, ಉಪಾಧ್ಯಾಯರ ಮೃತಿಯಲ್ಲಿಸ್ನಾನ ಮಾತ್ರ. ಆಚಾರ್ಯ, ಅವನ ಪುತ್ರ, ಉಪಾಧ್ಯಾಯರ ಮೃತಿಯಲ್ಲಿ ತ್ರಿದಿನ-ಏಕದಿನ. ಸದ್ಯಃ ಶೌಚಗಳೂ ಹೇಳಿವೆ. ಅಧ್ಯಯನ ತಾರತಮ್ಯದಿಂದ ವ್ಯವಸ್ಥೆ ಮಾಡಿಕೊಳ್ಳಬೇಕು.

ಪತಿತಾದಿಗಳಿಗೆ ಆಶೌಚ ಮಾಡಬೇಕಿಲ್ಲ ಅಮಂತ್ರಕ ದಾಹ, ಸ್ನಾನದಿಂದ ಶುದ್ಧಿ, ಪ್ರಾಯಶ್ಚಿತ್ತ ಶುದ್ಧಿಪೂರ್ವಕ ಪುನಃ ಸಂಸ್ಕಾರವಾದರೆ ಆಗ ಮಾತ್ರ ತ್ರಿದಿನಾಶೌಚ. ವಿಧಿ ಪ್ರಕಾರ ಪತಿತರನ್ನು ತ್ಯಾಗ ಮಾಡಿದರೆ ಆಶೌಚ ಪಾಲಿಸಬೇಕಿಲ್ಲ. ಬ್ರಹ್ಮಚಾರಿಗಳಿಗೆ, ಸನ್ಯಾಸಿಗಳಿಗೆ ಸಪಿಂಡಾದಿ ಮರಣದಲ್ಲಿ ಆಶೌಚವಿಲ್ಲ. ಸ್ನಾನಮಾತ್ರ. ಆದರೆ ಬ್ರಹ್ಮಚಾರಿ ಗುರುಕುಲದಲ್ಲಿ ಅಧ್ಯಯನ ಮಾಡುತ್ತಿದ್ದು ಆಶೌಚಿಗಳ ಸಂಪರ್ಕದಲ್ಲಿಲ್ಲದಿದ್ದರೆ ಮಾತ್ರ ಅಪವಾದ. ಬ್ರಹ್ಮಚಾರಿಮರಣದಲ್ಲಿ ಸಪಿಂಡರಿಗೂ ಹಿಂದೆ ಹೇಳಿದಂತೆ ಆಶೌಚವಿದೆ. ಸನ್ಯಾಸಿ ಮರಣದಲ್ಲಿ ಸಚೇಲ ಸ್ನಾನದಿಂದ ಶುದ್ಧಿ. ಆಶೌಚವಿಲ್ಲ. ಬ್ರಹ್ಮಚಾರಿಯು ಮಾತಾಪಿತೃಮಾತಾಮಹಾದಿಗಳಿಗೆ ಕ್ರಿಯೆ ನಡೆಸಬೇಕಾದಲ್ಲಿ ಕ್ರಿಯಾ ಮುಗಿಸಿ ಪ್ರತಿನಿತ್ಯ ಸ್ನಾನದಿಂದ ಶುದ್ಧನಾಗುತ್ತಾನೆ. ಆದರೆ ಆಶೌಚಿಗಳ ಅನ್ನ ಊಟ ಮಾಡಬಾರದು. ಅಲ್ಲಿ ವಾಸ ಮಾಡಬಾರದು.

ರಾಜರಿಗೆ, ರಾಜಕಾರ್ಯ ನಿಯುಕ್ತರಿಗೆ, ಇತರರಿಂದ ಮಾಡಲು ಅಶಕ್ಯವಾದ ಕರ್ಮಾನುಷ್ಠಾನ ಮಾಡುತ್ತಿರುವವರಿಗೆ, ಇತರರಿಂದ ಅಶಕ್ಯವಾದ ಚಿಕಿತ್ಸಾಕಾರ್ಯ ನಿರತ ವೈದ್ಯನಿಗೆ, ಕ್ರಮವಾಗಿ ರಾಜ ಕಾರ್ಯದಲ್ಲಿ, ನಿಯುಕ್ತ ಕಾರ್ಯದಲ್ಲಿ, ಆರ್ತ್ವಿಜ್ಯದಲ್ಲಿ ಚಿಕಿತ್ಸೆಯಲ್ಲಿ (ಆಯಾಯಾ ಕಾರ್ಯದಲ್ಲಿ) ಆಶೌಚವಿಲ್ಲ. ಮೃತಾಶೌಚ ಬಂದಲ್ಲಿ ಸ್ನಾನವಾಡಿ ಕಾರ್ಯ ಮುಂದುವರಿಸಬೇಕು. ನಿರ್ದಿಷ್ಟವಾದ ಕಾರ್ಯ ಹೊರತಾಗಿ ಇತರ ಅಧ್ಯಯನ ಅಧ್ಯಾಪನ ದಾನ ಪ್ರತಿಗ್ರಹ. ಯಜನ ಯಾಜನಯಾವುದನ್ನೂ ಮಾಡಲು ಶಾಸ್ತ್ರ ಸಮ್ಮತಿ ಇಲ್ಲ. ದೀಕ್ಷಿತನಿಗೆ ದೀಕ್ಷಾಮಧ್ಯದಲ್ಲಿ ಮಾತಾಪಿತೃವಿನ ಮರಣವಾದರೆ ದಾಹಾದಿ ಸಂಸ್ಕಾರ ಮುಗಿಸಿ ಯಜ್ಞಶಾಲೆಗೆ ಬಂದು

ಪವನಪಾವನಾದಿಗಳಿಂದ ಶುದ್ಧಿ ಸಂಪಾದಿಸಿಕೊಂಡು ಯಜ್ಞ ಶೇಷ ಮುಗಿಸಬೇಕು. ಬೇರೆ ಸೋದರರಿದ್ದಲ್ಲಿ ಅವರಿಂದ ಸಂಸ್ಕಾರ ಮಾಡಿಸಬೇಕು ಎನ್ನುವುದು ಒಂದು ಪಕ್ಷವಾದರೆ ಜ್ಯೇಷ್ಠನಾದರೆ ತಾನೇ ಮಾಡಬೇಕು ಎನ್ನುವುದು ಮತ್ತೊಂದು ಪಕ್ಷ.

ಪ್ರಾಜಾಪತ್ಯಾದಿಕೃಚ್ಛ್ರಾಚರಣೆ ಮಧ್ಯದಲ್ಲಿ ಜನನಾಶೌಚ ಬಂದರೆ ಏನೂ ಮಾಡಬೇಕಾಗಿಲ್ಲ. ವ್ರತ ಮುಂದುವರಿಯುತ್ತದೆ. ಮೃತಾಶೌಚ ಬಂದಲ್ಲಿ ಸ್ನಾನ ಮಾಡಿಕೊಂಡು ಮುಂದುವರಿಯಬೇಕು.

ದೇವೋತ್ಸವ ಯಜ್ಞ-ವಿವಾಹಾದ್ಯುತ್ಸವದಲ್ಲಿ ಆಚಾರ್ಯ ಯಜಮಾನ ಋತ್ವಿಕ್ ಪರಿಚಾರಕರಿಗೂ, ಉಪನಯನದಲ್ಲಿ ವಟುವಿಗೆ ನಾಂದೀ ನಂತರ ಮೇಧಾ ಜನನದವರೆಗೂ, ತಂದೆ ತಾಯಿಗಳಿಗೆ ಭಿಕ್ಷಾದಾನದವರೆಗೂ, ವಿವಾಹದಲ್ಲಿ ನಾಂದೀ ನಂತರ ಕನ್ಯಾದಾನದವರೆಗೆ ಮಾತಾಪಿತೃಗಳಿಗೂ, ವಧೂವರರಿಗೆ ಅವಭೃಥ ಸ್ನಾನದವರೆಗೂ ಆಶೌಚವಿಲ್ಲ. ಮೃತಾಶೌಚದಲ್ಲಿ ಸ್ನಾನ, ದೀಕ್ಷೆಯಲ್ಲಿ ಮಾರ್ಜನ, ವೇದ ಪಾರಾಯಣಾದಿಗಳಲ್ಲಿ ಆ ಕರ್ಮ ಮುಗಿಯುವವರೆಗೂ ಆಶೌಚವಿಲ್ಲ. ಆದರೆ ಇದು ಬೇರೆಯವರಿಂದ ಅಸಾಧ್ಯವಾದ ಕರ್ಮಗಳಿಗೆ ಮಾತ್ರ.

ಶ್ರಾದ್ಧದಲ್ಲಿ ಸಂಕಲ್ಪಾನಂತರ ಕರ್ತೃವಿಗೂ ಎರಡನೇ ವರಣಾ ನಂತರ ಭೋಕ್ತೃವಿಗೂ ಆಶೌಚವಿಲ್ಲ. 1)ಚೌಲಾದ್ಯುತ್ಸವದಲ್ಲಿ ಭೋಜನ ಮಧ್ಯದಲ್ಲಿ ಆಶೌಚ ಬಂದರೆ ಬೇರೆಯವರು ಪರಿವೇಷಣ ಮಾಡಬೇಕು. ಭೋಜನಾನಂತರ ಅನ್ನ ಗೃಹ ಜಲದಿಂದ ಆಚಮನ ಮಾಡಬೇಕು. ಯಾಕೆಂದರೆ ಆಶೌಚವು ವ್ಯಕ್ತಿಗೆ ಮಾತ್ರವಲ್ಲ, ಅವನ ಗೃಹಕ್ಕೆ, ಜಲಕ್ಕೆ, ದ್ರವ್ಯಕ್ಕೆ, ಎಲ್ಲವುದಕ್ಕೂ ಇರುತ್ತದೆ. ಕ್ರಿಯಾಕರ್ತೃಗೃಹಕ್ಕೆ ವಿಶೇಷವಾಗಿ ಇರುತ್ತದೆ.

ಮೃತಾಶೌಚ ಶ್ರವಣವಾದರೆ ಸ್ನಾನವಿದೆ. ಭೋಜನ ಪ್ರಾರಂಭವಾಗಿದ್ದರೆ ಅದೂ ಇಲ್ಲ. ಯಜ್ಞಯಾಗಾದಿಗಳನ್ನು ಮಾಡಲು ಅದಕ್ಕಾಗಿ ಸಂಗ್ರಹಿಸಿದ ದ್ರವ್ಯಕ್ಕೆ ಆಶೌಚವಿಲ್ಲ.



## ಅಶೌಚನಿಯಮ

ಅಶೌಚದಲ್ಲಿ ಪೂಜಾದಿ ಕರ್ಮಗಳಿಗೆ ಪುಷ್ಪಾದಿ ಸಂಗ್ರಹ. ಮಣ್ಣಿನ ಪಾತ್ರೆಗಳ ಸ್ಪರ್ಶ, ಪರಾನ್ನ ಭೋಜನ, ಮಂಚ ಶಯ್ಯಾದಿಶಯನ. ತಾಂಬೂಲ, ಚರ್ವಣ,ತೈಲಾಭ್ಯಂಗ, ಬೇರೆ ಆಶೌಚ ಉಳ್ಳವರ, ಅಥವಾ ಆಶೌಚವಿಲ್ಲದವರ ಸ್ಪರ್ಶ, ಅತಿಥಿಸತ್ಕಾರ ಇದಾವುದನ್ನೂ ಮಾಡಬಾರದು. ಇತರ ನಿತ್ಯ ನೈಮಿತ್ತಿಕ ಕಾರ್ಯಕರ್ಮಗಳಲ್ಲಿ ಅಧಿಕಾಲವಿಲ್ಲ. ರಸ ಪದಾರ್ಥ ಆಮದ್ರವ್ಯಗಳಿಗೆ ನಿಷೇಧವಿಲ್ಲ. ಗ್ರಹಣದಲ್ಲಿ ತತ್ಕಾಲದಲ್ಲಿ ಸ್ನಾನ ಮಾಡಿ ಜಪ ತರ್ಪಣಾದಿಗಳನ್ನು ಮಾಡಬೇಕು. ಹಿಂದೆ ಹೇಳಿದ ಸಂಪರ್ಕಾ ಶೌಚವು ಅವರಿಗೆ ಮಾತ್ರ. ಅವರ ಪತ್ನೀ ಪುತ್ರ ದ್ರವ್ಯಗಳಿಗೆ ಗೃಹಕ್ಕೆ ಇರುವುದಿಲ್ಲ.

ಶವಾಲಂಕಾರದಾಹಾದಿಗಳನ್ನು ಮಾಡಿದ ಸಮಾನೋದಕರಿಗೆ ದಶಾಹಾಶೌಚವಿದೆ. ಪಕ್ಷಿಣೀ ದಿನಾಶೌಚಿಗಳಿಗೆ ಮೂರು ದಿನ.

ಮೂರು ದಿನ ಆಶೌಚ ಉಳ್ಳ ಸಪಿಂಡರಿಗೂ ದಾಹಾದಿಕಾರ್ಯ ಮಾಡಿದರೆ ದಶಾಹಾಶೌಚ. ಅಸಪಿಂಡರಿಗೆ ದಾಹಾದಿ ಮಾಡಿದರೆ ಒಂದು ದಿನ. ಪ್ರೇತ ಗೃಹದಲ್ಲಿ ವಾಸ ಮಾಡಿದರೆ ಮೂರು ದಿನ. ಅಲ್ಲಿಯೇ ಭೋಜನ ಮಾಡಿದರೆ ದಶಾಹಾಶೌಚ. ಅನಾಥ ಶವ ಸಂಸ್ಕಾರಾದಿಗಳಲ್ಲಿ ಆಶೌಚವಿಲ್ಲ.

## ಅನುಗಮನಾಶೌಚ

ಬ್ರಾಹ್ಮಣನು ಬ್ರಾಹ್ಮಣಶವಾನುಗಮನ( ಶವದ ಜೊತೆಗೆ ಹೋದರೆ) ರೋದನ ಮಾಡಿದರೆ ಸ್ನಾನ - ವಹ್ನಿ ಸ್ಪರ್ಶ ಆಜ್ಯ ಪ್ರಾಶನ ಪುನಃ ಸ್ನಾನದಿಂದ ಶುದ್ಧಿ. ಕ್ಷತ್ರಿಯ ಶವಾನುಗಮನದಲ್ಲಿ, ಒಂದು ದಿನ, ವೈಶ್ಯ ಶವಾನುಗಮನದಲ್ಲಿ ಪಕ್ಷಿಣೀ. ಶೂದ್ರ ಶವಾನುಗಮನದಲ್ಲಿ ತ್ರಿದಿನಾಶೌಚ, ನದೀ ಸ್ನಾನ, ಅಷ್ಟೋತ್ತರ ಸಹಸ್ರ ಗಾಯತ್ರೀ ಜಪ. ಅಕಸ್ಮಾತ್ ಶವದರ್ಶನವಾದರೆ ಆಚಮನ. ಶವಕ್ಕೆ ಅಲಂಕಾರ ಮಾಡಿದರೆ ಬುದ್ಧಿ ಪೂರ್ವಕ ಶವದರ್ಶನ ಮಾಡಿದರೆ, ಸಚೇಲ ಸ್ನಾನ ಮಾಡಬೇಕು.

## ಅಧಿಕಾರ ವಿಶೇಷ

ದತ್ತ ಸ್ವೀಕಾರವಾದನಂತರ ಮಗ ಹುಟ್ಟಿದರೆ ಅವನೇ ಜ್ಯೇಷ್ಠ, ಅವನೇ ಉತ್ತರ ಕ್ರಿಯಾಧಿಕಾರಿ. ಆದರೆ ದತ್ತಕನಿಗೆ ಆಸ್ತಿಯಲ್ಲಿ ನಾಲ್ಕನೇ ಒಂದು ಭಾಗ ಅಧಿಕಾರವಿದೆ. ಕರ್ಮಾಧಿಕಾರವಿಲ್ಲ. ಪುತ್ರಿಕಾಪುತ್ರ-ದತ್ತ ಇಬ್ಬರಿದ್ದಲ್ಲಿ ಪುತ್ರಿಕಾ ಪುತ್ರನೇ ಅಧಿಕಾರಿ ಆಸ್ತಿಯಲ್ಲಿ ದತ್ತಕನಿಗೆ ನಾಲ್ಕನೇ ಒಂದು ಭಾಗ ಮಾತ್ರದಲ್ಲಿ ಅಧಿಕಾರ. ಪುತ್ರಿಕಾ ಪುತ್ರನನ್ನು ಮಾಡಿಕೊಂಡನಂತರ ಮಗ ಹುಟ್ಟಿದಲ್ಲಿ ಇಬ್ಬರೂ ಕರ್ಮಾಧಿಕಾರಿಗಳು. ಆಸ್ತಿಯಲ್ಲಿ ಸಮಭಾಗಿಗಳಾದರೂ ಔರಸಪುತ್ರ ಜ್ಯೇಷ್ಠನೆಂದು ಗಣಿಸಲ್ಪಟ್ಟಿದ್ದಾನೆ. ದೌಹಿತ್ರ ಮತ್ತು ಪತ್ನೀ ಇವರಿಬ್ಬರ ವಿಚಾರದಲ್ಲಿ ಶಾಸ್ತ್ರವು ಸಮಾನಾಧಿಕಾರವಿತ್ತಂತೆ ಕಾಣುತ್ತದೆ. ಇಲ್ಲಿಯೂ ಆಸ್ತಿಯ ಅಧಿಕಾರಿಗೆ ಪ್ರಾಧಮ್ಯ. ಆನಂತರ ಮಗಳಿಗೆ ಅಧಿಕಾರ. ಮಗಳ ನಂತರ ದೌಹಿತ್ರರೆಲ್ಲರೂ ಸಮಾನಾಧಿಕಾರಿಗಳು. ಮಾತಾಮಹನಿಗೆ ಸೋದರರಿದ್ದು ವಿಭಾಗವಾಗದಿದ್ದರೆ ಅವರೇ ಅಧಿಕಾರಿಗಳು ಆನಂತರ ಸೋದರಪುತ್ರರು ಸಪಿಂಡರು. ಪುರೋಹಿತ, ಶಿಷ್ಯ, ಬ್ರಾಹ್ಮಣ, ರಾಜರು ಕ್ರಮವಾಗಿ ಆಸ್ತಿಗೂ ಕ್ರಿಯೆಗೂ ಅಧಿಕಾರಿಗಳಾಗುತ್ತಾರೆ. ಪುತ್ರನಿಗೆ ಚೂಡಾಕರ್ಮವಾಗಿದ್ದರೆ ದಾಹಕ್ಕೆ ಅಧಿಕಾರಿ. ಚೂಡಾಕರ್ಮವಾಗದಿದ್ದರೂ ಮೂರು ವರ್ಷವಾಗಿದ್ದರೆ ಮಂತ್ರ ಪೂರ್ವಕ ದಾಹ ಮುಗಿಸಿ ಮುಂದಿನ ಕ್ರಿಯೆಯನ್ನು ಋತ್ವಿಗಾದಿಗಳಿಂದ ಮಾಡಿಸಬೇಕು. ಎಲ್ಲವನ್ನು ಬೇರೆಯವರಿಂದ ಮಾಡಿಸುವುದು ದಕ್ಷಿಣ ಭಾರತದ ಸಂಪ್ರದಾಯ. ಅಧಿಕಾರ ಪಡೆದ ಸ್ತ್ರೀ ರಜಸ್ವಲೆಯಾದರೆ ಅಮಂತ್ರಕ ದಾಹ ಮಾಡಿ 4 ಯಾ 5ನೇ ದಿನ ಸಮಂತ್ರಕ ದಾಹಾದಿ ಕ್ರಿಯೆಯನ್ನು ನಡೆಸಬೇಕು. ಸ್ತ್ರೀಗೆ ಪುತ್ರರಿಂದಾರಂಭಿಸಿ ದೌಹಿತ್ರನವರೆಗೆ ಅಧಿಕಾರಿಗಳಿಲ್ಲದಿದ್ದರೆ ಸವತಿಯ ಮಗ ಆನಂತರ ಪತಿಗೆ, ಮಗಳಿಗೆ, ಜ್ಞಾತಿಗಳಿಗೆ, ಅಧಿಕಾರ ಪ್ರಾಪ್ತವಾಗುತ್ತದೆ. ಪತ್ನೀ ಮಗಳು ಅಧಿಕಾರಿಗಳಾದರೂ ಇದೇ ನ್ಯಾಯ. ಪ್ರತಿನಿಧಿಯಿಂದ ಕ್ರಿಯೆ ಮಾಡಿಸುವುದಾದಲ್ಲಿ ಪ್ರಾಚೀನಾವೀ ತತ್ವಮೊದಲಾದ ನಿಯಮಗಳನ್ನು ಮುಖ್ಯ ಕರ್ತೃವೇ ಮಾಡಬೇಕು. ಋತ್ವಿಜರಿಗೆ ಈ ಯಾವ ನಿಯಮವೂ ಇಲ್ಲ. ಬಂಧುಗಳೇ ಸ್ತ್ರೀ ಬಗ್ಗೆ ಕ್ರಿಯೆ ಮಾಡುವುದಾದರೆ ಪ್ರಾಚೀನಾವೀತತ್ವ ಮೊದಲಾದ



ಧರ್ಮವನ್ನು ಪಾಲಿಸಬೇಕು ಎನ್ನುವುದು ಶಾಸ್ತ್ರಸಮ್ಮತ , ಶಿಷ್ಟ ಸಂಪ್ರದಾಯ. ಪಿತೃ ಸಂಸ್ಕಾರ ಮಾಡಿದ ವರ್ಷ ಮಧ್ಯದಲ್ಲಿ ತಾಯಿಗೆ ಸಂಸ್ಕಾರವೂ ಮಾಡಬೇಕಾಗಿ ಬಂದರೆ ವಪನವಿದೆ. ಗರ್ಭಿಣಿ ಪತಿಯಾದರೂ, ತಂದೆ, ತಾಯಿ, ಅಣ್ಣ, ಮಾತಾಮಹ, ಮಾತಾಮಹೀ, ಮಾತುಲ, ಪಿತೃವ್ಯ ಶ್ವಶುರ ವಿದ್ಯಾ ಗುರು ಆಚಾರ್ಯ ಇವರಿಗೆ ಇವರ ಪತ್ನೀಗಳಿಗೆ ಸಂಸ್ಕಾರ ಮಾಡುವಾಗ ವಪನವಿದೆ. ಇದಲ್ಲದೆ ಸವತೀ ತಾಯಿ ಸೋದರತ್ತೆ, ತಾಯಿಯ ಸೋದರಿಯರು ಅಕ್ಕ, ಅವರಿಗೆ ಸಂಸ್ಕಾರ ಮಾಡುವಾಗಲೂ ವಪನವಿದೆ. ಮೇಲೆ ಕಾಣಿಸಿದವರಿಗೆ ಸಂಸ್ಕಾರವನ್ನು ಬ್ರಹ್ಮಚಾರಿ ಮಾಡಿದರೂ ಬ್ರಹ್ಮಚರ್ಯವ್ರತಕ್ಕೆ ಲೋಪವಿಲ್ಲ. ಆದರೆ ಸೂತಕಾನ್ನ ಸೂತಕಿಗಳ ಸಂಪರ್ಕ ಬಿಟ್ಟಿರಬೇಕು. ಮೇಲೆ ಹೇಳಿದವರನ್ನು ಬಿಟ್ಟು ಬೇರೆಯವರಿಗೆ ಸಂಸ್ಕಾರ ಮಾಡಿದರೆ ಪುನಃ ಉಪನಯನವಾಗಬೇಕು.

## ವಿಭಿನ್ನ ಸಂಪ್ರದಾಯ

ಎಲ್ಲ ಪುತ್ರರ ಅನುಮತಿ ಪಡೆದು ಜ್ಯೇಷ್ಠನೇ ಸಕಲ ಕ್ರಿಯೆಯನ್ನು ಮಾಡಬೇಕು. ವರ್ಷದ ಕೊನೇವರೆಗೆ ಮಾಸಿಕಾದಿಗಳನ್ನು ಒಬ್ಬನೇ ಮಾಡಬೇಕು. ವರ್ಷದನಂತರ ವಿಭಾಗವಾಗಿದ್ದರೆ ಎಲ್ಲರೂ ಬೇರೆ ಬೇರೆ ಮಾಡಬೇಕು ಎನ್ನುವುದು ಕೆಲವು ವಚನಗಳ ಅಭಿಪ್ರಾಯವಾದರೆ ಮತ್ತೆ ಬೇರೆ ವಚನಗಳು ವಿಭಾಗವಾಗಲೀ ಆಗದಿರಲಿ ಆಸ್ತಿಗೆ ಎಲ್ಲರೂ ಅಧಿಕಾರಿಗಳಾದಂತೆ ಉತ್ತರಕ್ರಿಯೆಗಳನ್ನು ಸಮಾನ ಅಧಿಕಾರಿಗಳಾದ್ದರಿಂದ ದಹನ-ಮಾಸಿಕ ಸಪಿಂಡೀಕರಣಗಳನ್ನು ಎಲ್ಲಾ ಪುತ್ರರೂ ಮಾಡಬೇಕೆಂದು ಹೇಳುತ್ತವೆ. ಇದರಲ್ಲಿ ಶಿಷ್ಟಾಚಾರವೇ ನಿರ್ಣಾಯಕ.

## ಶ್ರಾದ್ಧ ಕಾಲ

ಏಕೋದ್ದಿಷ್ಟ ಶ್ರಾದ್ಧಕ್ಕೆ ಮಧ್ಯಾಹ್ನ ವ್ಯಾಪ್ತಿ ಇರಬೇಕು. ಎರಡೂ ದಿನ ವ್ಯಾಪ್ತಿ ಇದ್ದಲ್ಲಿ, ಅಥವಾ ಇರದಿದ್ದಲ್ಲಿ ಮಾರನೇ ದಿನವೇ ಆಗಬೇಕು. ಏಕದೇಶ ವ್ಯಾಪ್ತಿ ಇದ್ದರೆ ಅಧಿಕ ವ್ಯಾಪ್ತಿಯನ್ನು ತೆಗೆದುಕೊಳ್ಳಬೇಕು. ಪಾರ್ವಣ ಶ್ರಾದ್ಧಕ್ಕೆ ಅಪರಾಹ್ನ ವ್ಯಾಪ್ತಿ ಮುಖ್ಯ ಎರಡೂ ದಿನ ಅಪರಾಹ್ನ ವ್ಯಾಪ್ತಿ

ಇದ್ದಲ್ಲಿ ಅಥವಾ ಇರದಿದ್ದಲ್ಲಿ ಮಾರನೇ ದಿನವೇ ಗ್ರಾಹ್ಯ. ಏಕದೇಶ ವ್ಯಾಪ್ತಿ ಇದ್ದಲ್ಲಿ ಅಧಿಕ ವ್ಯಾಪ್ತಿ ಇರುವ ದಿನವನ್ನು ತೆಗೆದುಕೊಳ್ಳಬೇಕು. ಇದೊಂದು ಪಕ್ಷ.

ಕೇವಲ ಅಪರಾಹ್ಣ ವ್ಯಾಪ್ತಿ ಇದ್ದರೆ ಸಾಲದು ಅಪರಾಹ್ಣ ಸಾಯಾಹ್ಣ ಉಭಯ ವ್ಯಾಪ್ತಿ ಇರಬೇಕು. ಸಾಯಾಹ್ಣ ವ್ಯಾಪ್ತಿ ಪೂರ್ತಿ ಇಲ್ಲದಿದ್ದರೆ ಸಾಯಾಹ್ಣ ಸ್ಪರ್ಶವಿರಬೇಕು. ಪೂರ್ವ ದಿನ ಸಾಯಾಹ್ಣ ವ್ಯಾಪ್ತಿ ಪರದಿನ ಸಂಪೂರ್ಣ ಅಪರಾಹ್ಣ ವ್ಯಾಪ್ತಿ ಇದ್ದರೂ ಪೂರ್ವದಿನವನ್ನೇ ತೆಗೆದುಕೊಳ್ಳಬೇಕು. ಪರದಿನ ಕೇವಲ ಅಪರಾಹ್ಣ ವ್ಯಾಪ್ತಿ ಇದ್ದರೂ ಪೂರ್ವ ದಿನ ಸಾಯಾಹ್ಣ ಅಸ್ತಮಯವ್ಯಾಪ್ತಿ ಹೀಗೆ ಎರಡು ಗುಣವಿರುವುದರಿಂದ ಮೊದಲ ದಿನವೇ ಶ್ರಾದ್ಧ ಮಾಡಬೇಕು ಎನ್ನುವುದು ಮತ್ತೊಂದು ಶಾಸ್ತ್ರ. ಮೊದಲ ಶಾಸ್ತ್ರ ಹೆಚ್ಚು ಕಡೆಯಲ್ಲಿ ಪ್ರಚಾರದಲ್ಲಿದ್ದರೂ ಎರಡನೇ ಪಕ್ಷವೇ ಪಶ್ಚಿಮ ಕರಾವಳಿ ಪರಶುರಾಮ ಕ್ಷೇತ್ರದ ಸೌರರಲ್ಲಿ ಅನಾದಿಕಾಲದಿಂದ ಪ್ರಚಾರದಲ್ಲಿದ್ದಂತೆ ಕಂಡುಬರುತ್ತದೆ. ಇದರಲ್ಲಿ ಶಿಷ್ಟಾಚಾರವೇ ನಿರ್ಣಾಯಕ.

## ಒಂದು ಮಾಸದಲ್ಲಿ ಎರಡು ತಿಥಿ ಬಂದರೆ

ಒಂದು ಮಾಸದಲ್ಲಿ ಎರಡು ತಿಥಿ ಬಂದಲ್ಲಿ ಉತ್ತರ ತಿಥಿಯಲ್ಲೆ ಮಾಡಬೇಕು ಎನ್ನುವುದು ಎಲ್ಲ ನಿಬಂಧಕಾರರ ಅಭಿಪ್ರಾಯ. ಮತ್ತು ಹೆಚ್ಚಿನ ಸಂಪ್ರದಾಯ ವಿದೆ. ಚಾಂದ್ರರಿಗೆ ಮೊದಲ ತಿಥಿ ಅಧಿಕ ಮಲಿಮ್ಲುಚವೆನಿಸಿಕೊಂಡರೆ ಸೌರರಿಗೆ ಪೂರ್ವ ತಿಥಿಯು ಮಲಿಮ್ಲುಚ ಶೂನ್ಯವೆನಿಸಿಕೊಳ್ಳುತ್ತದೆ. ಉತ್ತರ ತಿಥಿಗೆ ಸಂಕ್ರಾಂತ್ಯಾದಿ ದೋಷ ಬಂದಲ್ಲಿ ಪೂರ್ವತಿಥಿಯಲ್ಲಿ ಮಾಡಬೇಕು. ಎರಡು ತಿಥಿಗೆ ಸಂಕ್ರಾಂತ್ಯಾದಿ ದೋಷ ಬಂದಲ್ಲಿ ಉತ್ತರ ತಿಥಿಯಲ್ಲೆ ಮಾಡಬೇಕು. ಒಂದು ತಿಥಿಯು ಸಿಗದಿರುವಾಗ ಮೃತ ಚಾಂದ್ರಮಾಸದಲ್ಲಿ ಮಾಡಬೇಕು ಎನ್ನುವ ಪಕ್ಷವು ಮದ್ರಾಸು ಕರ್ನಾಟಕ ಆಂಧ್ರ ದೇಶದ ಸೌರರಲ್ಲಿ ಆಚರಣೆಯಲ್ಲಿದೆ . ಅಲ್ಲಿಯ ಪಂಚಾಂಗದಲ್ಲಿ ಪೂರ್ವ ತಿಥಿಯನ್ನು ಶೂನ್ಯವೆಂತ ನೂರಾರುವರ್ಷದಿಂದ ಬರೆಯುತ್ತಾ ಬಂದಿದ್ದಾರೆ. ಶ್ರುತಿಯೂ ಕೂಡಾ ತಿಥಿ ಹೆಚ್ಚಿಗೆ ಮಾಡಬಾರದು ಬಿಡಲೂ ಬಾರದೆಂದು ಆಜ್ಞಾಪಿಸುತ್ತದೆ.



ಆದರೂ ಕೂಡ ಕೆಲವರು ತಿಥಿಯನ್ನು ವ್ಯರ್ಥವಾಗಿ ಬಿಡಬಾರದು ಎನ್ನುವ ಶ್ರದ್ಧೆಯಿಂದ ಎರಡೂ ತಿಥಿಗಳಲ್ಲಿ ಶ್ರಾದ್ಧ ಮಾಡುವುದು;ಒಂದು ಸಪಿಂಡವಾಗಿ ಇನ್ನೊಂದು ಪಿಂಡರಹಿತವಾಗಿ ಮಾಡುವುದು ಕಂಡಿದೆ. ಆದರೆ ಒಂದು ಶ್ರಾದ್ಧ ವನ್ನೂ ಮಾಡದಿರುವ ಈ ಕಾಲದಲ್ಲಿ ನಿಷ್ಕಾರಣವಾಗಿ ವಿಧಿ ಇಲ್ಲದಿದ್ದರೂ ಎರಡು ಶ್ರಾದ್ಧವನ್ನು ಹೇರುವುದು ಶ್ರುತಿ-ಸ್ಮೃತಿ ಆಚಾರಕ್ಕೆ ವಿರುದ್ಧವಾಗಿದೆ. ಆದರೂ ಇದನ್ನು ಶಿಷ್ಟರಿಗೇ ಬಿಡಲಾಗಿ.

## ಕ್ರಿಯಾಧಿಕಾರಿ ಕ್ರಮ

ಪುತ್ರ
ಪೌತ್ರ
ಪ್ರಪೌತ್ರ
ಪುತ್ರಿಕಾಪುತ್ರ
ದತ್ತ
ದತ್ತಕಪುತ್ರ
ಧನಹಾರೀ ದೌಹಿತ್ರ
ದೌಹಿತ್ರ
ಪತ್ನೀ
ಪತಿ
ಸಪತ್ನೀಪುತ್ರ
ದುಹಿತಾ
ಭ್ರಾತಾ
ತತ್ಪುತ್ರ
ಭಿನ್ನೋದರ ಭ್ರಾತಾ
ತತ್ಪುತ್ರ
ಪಿತಾ
ಮಾತಾ
ಸ್ನುಷಾ
ಪೌತ್ರೀ
ದೌಹಿತ್ರೀ
ಪೌತ್ರಪತ್ನೀ
ತತ್ಪುತ್ರೀ
ದತ್ತಕ ಪತ್ನೀ
ಭಗಿನೀ
ಭಾಗಿನೇಯ
ಸಪಿಂಡ
ಸೋದಕ
ಮಾತೃ ಸಪಿಂಡ

## ಕೆಲವು ಪಾರಿಭಾಷಿಕ ಪದಾರ್ಥ:

ಪಿತಾ-ತಂದೆ
ಮಾತಾ-ತಾಯಿ
ಪಿತಾಮಹ-ತಂದೆಯ ತಂದೆ
ಪಿತಾಮಹೀ-ತಂದೆಯ ತಾಯಿ
ಪ್ರಪಿತಾಮಹ-ತಂದೆಯ ಅಜ್ಜ
ಪ್ರಪಿತಾಮಹೀ-ತಂದೆಯ ಅಜ್ಜಿ
ಪಿತೃವ್ಯ -ತಂದೆಯ ಸೋದರ
ಭ್ರಾತಾ-ಸೋದರ
ಭ್ರಾತೃಪುತ್ರ-ಸೋದರನ ಮಗ
ದುಹಿತಾ-ಮಗಳು
ದೌಹಿತ್ರ-ಮಗಳ ಮಗ
ಭಗಿನೀ-ಸೋದರಿ
ಭಾಗಿನೇಯ-ಸೋದರಿ ಪುತ್ರ
ಪಿತೃಷ್ವಸಾ-ತಂದೆಯ ಸೋದರಿ
ಪಿತೃಷ್ವಸ್ರೇಯ-ತಂದೆಯ ಸೋದರಿ ಪುತ್ರ
ಮಾತಾಮಹ-ತಾಯಿಯ ತಂದೆ
ಮಾತಾಮಹಿ-ತಾಯಿಯ ತಾಯಿ
ಮಾತೃಷ್ವಸಾ-ತಾಯಿಯ ಸೋದರಿ
ಮಾತೃಷ್ವಸ್ರೇಯ-ತಾಯಿಯ ಸೋದರಿ ಪುತ್ರ
ಮಾತುಲ-ಸೋದರಮಾವ
ಮಾತುಲಾನೀ-ಅವನ ಹೆಂಡತಿ
ಸ್ನುಷಾ-ಸೊಸೆ
ಪೌತ್ರೀ-ಮೊಮ್ಮಗಳು
ಪೌತ್ರಪತ್ನೀ-ಮೊಮ್ಮಗನ ಹೆಂಡತಿ
ದೌಹಿತ್ರೀ-ಮಗಳ ಮಗಳು